# ನವೋದಯ ವಿದ್ಯಾಲಯ ಸಮಿತಿ

## 6ನೇ ತರಗತಿಗೆ ಪ್ರವೇಶಕ್ಕಾಗಿ

## ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ-2022 ರ ವಿವರಣಾ ಪತ್ರ

# ನವೋದಯ ವಿದ್ಯಾಲಯ ಯೋಜನೆ

## ಪ್ರಸ್ತಾವನೆ

ರಾಷ್ಟ್ರೀಯ ಶಿಕ್ಷಣ ನೀತಿ (1986) ಗೆ ಅನುಗುಣವಾಗಿ ಭಾರತ ಸರ್ಕಾರವು ಜವಾಹರ ನವೋದಯ ವಿದ್ಯಾಲಯ(ಜ.ನ.ವಿ) ಗಳನ್ನು ಪ್ರಾರಂಭಿಸಿತು. ಈಗ ಈ ಜ.ನ.ವಿಗಳು 27 ರಾಜ್ಯಗಳಲ್ಲಿ ಹಾಗೂ 8 ಕೇಂದ್ರಾಡಳಿತ ಪ್ರದೇಶಗಳಲ್ಲಿ ವ್ಯಾಪಿಸಿವೆ. ಇವು ಸಹಶಿಕ್ಷಣ ವಸತಿ ಶಾಲೆಗಳಾಗಿದ್ದು, ಇವುಗಳಿಗೆ ಸ್ವಾಯತ್ತ ಸಂಸ್ಥೆಯಾದ ನವೋದಯ ವಿದ್ಯಾಲಯ ಸಮಿತಿಯ ಮೂಲಕ ಭಾರತ ಸರ್ಕಾರವು ಪೂರ್ಣ ಆರ್ಥಿಕ ಸಹಾಯವನ್ನು ನೀಡುತ್ತಾ ಆಡಳಿತ ನಿರ್ವಹಣೆ ಮಾಡುತ್ತಿದೆ. ಜವಾಹರ ನವೋದಯ ವಿದ್ಯಾಲಯ ಆಯ್ಕೆ ಪರೀಕ್ಷೆಯ ಮೂಲಕ ಆರನೆಯ ತರಗತಿಗೆ ಪ್ರವೇಶ ನೀಡಲಾಗುವುದು. ಈ ವಿದ್ಯಾಲಯಗಳಲ್ಲಿ ಬೋಧನಾ ಮಾಧ್ಯಮವು ಎಂಟನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾಂತೀಯ ಭಾಷೆಯಾಗಿರುವುದು. ಮುಂದಿನ ತರಗತಿಗಳಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಇಂಗ್ಲಿಷ್ ಹಾಗೂ ಸಮಾಜ ವಿಜ್ಞಾನ ವಿಷಯಗಳಿಗೆ ಹಿಂದಿ ಬೋಧನಾ ಮಾಧ್ಯಮವಾಗಿರುವುದು. ಜ.ನ.ವಿಗಳ ವಿದ್ಯಾರ್ಥಿಗಳು ಕೇಂದ್ರ ಮಾಧ್ಯಮಿಕ ಶಿಕ್ಷಣ ಮಂಡಳಿಯು ನಡೆಸುವ ಪರೀಕ್ಷೆಗಳನ್ನು ತೆಗೆದುಕೊಳ್ಳುವರು. ಈ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನೊಳಗೊಂಡಂತೆ ಊಟ, ವಸತಿ, ಸಮವಸ್ತ್ರ ಮತ್ತು ಪಠ್ಯಪುಸ್ತಕಗಳನ್ನು ಕೊಡಲಾಗುವುದು. ಆದ್ದರಿಂದ ನಾಮಮಾತ್ರಕ್ಕೆಂಬಂತೆ ಪ್ರತಿ ತಿಂಗಳಿಗೆ ಶುಲ್ಕದ ರೂಪದಲ್ಲಿ (ಫೀಸ್) ರೂ.600/-ಗಳನ್ನು 9ನೇ ತರಗತಿಯಿಂದ 12ನೇ ತರಗತಿಯವರೆಗಿನ ವಿದ್ಯಾರ್ಥಿಗಳು ವಿದ್ಯಾಲಯದ ವಿಕಾಸ ನಿಧಿಗೆ ಕೊಡಬೇಕಾಗುವುದು. ಆದಾಗ್ಯೂ ಪರಿಶಿಷ್ಟ ಜಾತಿ (SC)/ಪರಿಶಿಷ್ಟ ಪಂಗಡದ (ST) ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು, ಎಲ್ಲಾ ವಿದ್ಯಾರ್ಥಿನಿಯರು ಮತ್ತು ಬಡತನ ರೇಖೆಗಿಂತ ಕಡಿಮೆ ಆದಾಯ ಇರುವ (ಬಿಪಿಎಲ್) ಕುಟುಂಬದ ವಿದ್ಯಾರ್ಥಿಗಳಿಗೆ ಈ ಶುಲ್ಕವಿರುವುದಿಲ್ಲ. ವಿನಾಯಿತಿ ಪಡೆದ ವರ್ಗವನ್ನು ಹೊರತು ಪಡಿಸಿ (VI ರಿಂದ VIII ವರ್ಗದ ವಿದ್ಯಾರ್ಥಿಗಳು, ಎಲ್ಲಾ ಪರಿಶಿಷ್ಟ ಜಾತಿ(SC)/ಪರಿಶಿಷ್ಟ ಪಂಗಡ(ST)ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರುಗಳಿಗೆ ಮತ್ತು ಬಡತನ ರೇಖೆಗಿಂತ ಕಡಿಮೆ ಆದಾಯದ ವಿದ್ಯಾರ್ಥಿಗಳು) ಸರ್ಕಾರಿ ನೌಕರರ ಮಕ್ಕಳಿಗೆ ಸಂಬಂಧಿಸಿದಂತೆ ವಿಕಾಸ ನಿಧಿ ತಿಂಗಳಿಗೆ ರೂಪಾಯಿ 1,500/- ರಂತೆ ಅಥವಾ ಪೋಷಕರು ತಿಂಗಳಿಗೆ ಪಡೆಯುವ ನಿಜವಾದ ಮಕ್ಕಳ ಶಿಕ್ಷಣ ಭತ್ಯೆ ಯಾವುದು ಕಡಿಮೆಯೋ ಆ ಶುಲ್ಕ ವಿಧಿಸಲಾಗುತ್ತದೆ. ಆದರೆ ವಿದ್ಯಾಲಯದ ವಿಕಾಸ ನಿಧಿ ಪ್ರತಿ ವಿದ್ಯಾರ್ಥಿಗೆ, ಪ್ರತಿ ತಿಂಗಳಿಗೆ ರೂಪಾಯಿ 600/-ಗಿಂತ ಕಡಿಮೆ ಇರುವುದಿಲ್ಲ.

**ಯೋಜನೆಯ ಉದ್ದೇಶಗಳು:**

(i) ವಿಶೇಷವಾಗಿ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಅತ್ಯಾಧುನಿಕ ಶಿಕ್ಷಣ ಹಾಗೂ ಉತ್ತಮ ಗುಣಮಟ್ಟದ ಸಂಸ್ಕೃತಿಯನ್ನು ಒಳಗೊಂಡ ಮೌಲ್ಯಾಧಾರಿತ ಶಿಕ್ಷಣ ಕೊಡುವುದರೊಂದಿಗೆ, ಪರಿಸರ ಜಾಗೃತಿಯನ್ನು ಉಂಟುಮಾಡಲಾಗುವುದು, ಸಾಹಸಪ್ರವೃತ್ತಿಯನ್ನು ಬೆಳೆಸಲಾಗುವುದು ಮತ್ತು ಶಾರೀರಿಕ ಶಿಕ್ಷಣವನ್ನು ನೀಡಲಾಗುವುದು.

(ii) ವಿದ್ಯಾರ್ಥಿಗಳಿಗೆ ಮೂರು ಭಾಷೆಗಳಲ್ಲಿ ಓದು, ಬರಹ ಕಲಿಯಲು ಅನುವು ಮಾಡಿಕೊಡಲಾಗುವುದು.

(iii) ವಿದ್ಯಾರ್ಥಿಗಳ ವಿಶೇಷ ವಲಸೆ ನೀತಿಯ ಮುಖಾಂತರ, ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸುವ ಸಲುವಾಗಿ ವಿದ್ಯಾರ್ಥಿಗಳನ್ನು ಹಿಂದಿ ಮಾತನಾಡದ ರಾಜ್ಯಗಳಿಂದ, ಹಿಂದಿ ಮಾತನಾಡುವ ರಾಜ್ಯಗಳಿಗೆ ಒಂದು ವರ್ಷದ ಮಟ್ಟಿಗೆ ಕಳುಹಿಸಿಕೊಡಲಾಗುವುದು. ಇದೇರೀತಿಯಲ್ಲಿ ಹಿಂದಿ ಮಾತನಾಡುವ ರಾಜ್ಯಗಳಿಂದ ಹಿಂದಿ ಮಾತನಾಡದ ರಾಜ್ಯಗಳಿಗೆ ಕಳುಹಿಸಿಕೊಡಲಾಗುವುದು.

(iv) ಪ್ರತಿ ಜಿಲ್ಲೆಯಲ್ಲಿ ಅತ್ಯುತ್ತಮ ಗುಣಮಟ್ಟದ ಶಾಲಾ ಶಿಕ್ಷಣವನ್ನು ಅಭಿವೃದ್ಧಿಪಡಿಸುವ ಮತ್ತು ಅನುಭವಗಳನ್ನು ಹಾಗೂ ಸೌಲಭ್ಯಗಳನ್ನು ಪರಸ್ಪರ ವಿನಿಮಯಿಸಿಕೊಳ್ಳುವ ಕೇಂದ್ರವನ್ನಾಗಿಸುವುದು.

## 1.1 ರಾಜ್ಯಾನುಸಾರ ಜವಾಹರ ನವೋದಯ ವಿದ್ಯಾಲಯಗಳ ಹಂಚಿಕೆ:

ನವೋದಯ ವಿದ್ಯಾಲಯ ಯೋಜನೆಯನ್ವಯ ಪ್ರತಿ ಜಿಲ್ಲೆಗೆ ಒಂದರಂತೆ ಜವಾಹರ ನವೋದಯ ವಿದ್ಯಾಲಯವನ್ನು ಹಂತಹಂತವಾಗಿ ಸ್ಥಾಪಿಸಲಾಗುವುದು. ಪ್ರಸ್ತುತ 27 ರಾಜ್ಯಗಳಲ್ಲಿ ಹಾಗೂ 8 ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 661ವಿದ್ಯಾಲಯಗಳು ಮಂಜೂರಾಗಿವೆ. ಇದರಲ್ಲಿ 645 ವಿದ್ಯಾಲಯಗಳು ಕಾರ್ಯನಿರತವಾಗಿವೆ.

**ವಿವಿಧ ರಾಜ್ಯಗಳಲ್ಲಿ ಸ್ಥಾಪನೆಗೊಂಡಿರುವ ವಿದ್ಯಾಲಯಗಳ ವಿವರ ಕೆಳಕಾಣಿಸಿದಂತಿದೆ**

| | | | |
|---|---|---|---|
| ಆಂಧ್ರಪ್ರದೇಶ | 13+2** | ಲಕ್ಷದ್ವೀಪ | 01 |
| ಅಸ್ಸಾಂ | 27+1** | ಮಧ್ಯಪ್ರದೇಶ | 51+2**+1* |
| ಅರುಣಾಚಲ್ ಪ್ರದೇಶ | 18 | ಮಹಾರಾಷ್ಟ್ರ | 33+1** |
| ಅಂಡಮಾನ್ ಮತ್ತು ನಿಕೋಬಾರ್ | 03 | ಮಣಿಪುರ | 09+2* |
| ಬಿಹಾರ | 38+1** | ಮೇಘಾಲಯ | 11+1** |
| ಚಂಡೀಘಡ | 01 | ಮಿಜೋರಾಮ್ | 08 |
| ಛತ್ತೀಸ್‌ಘಡ | 27+1** | ನಾಗಾಲ್ಯಾಂಡ್ | 11 |
| ದೆಹಲಿ | 09 | ಒರಿಸ್ಸಾ | 30+1** |
| ದಮನ್ ಮತ್ತು ದಿಯು ದಾದ್ರಾ ಮತ್ತು ನಗರ ಹವೇಲಿ | 03 | ಪಂಜಾಬ್ | 22+1** |
| ಗೋವ | 02 | ಪಾಂಡಿಚೆರಿ | 04 |
| ಗುಜರಾತ | 33+1** | ರಾಜಸ್ಥಾನ | 33+2** |
| ಹರಿಯಾಣ | 21 | ಸಿಕ್ಕಿಂ | 04 |
| ಹಿಮಾಚಲ ಪ್ರದೇಶ | 12 | ತ್ರಿಪುರಾ | 08 |
| ಯುಟಿ ಲಡಾಕ್ | 02 | ತೆಲಂಗಾಣ | 09 |
| ಜಮ್ಮು ಮತ್ತು ಕಾಶ್ಮೀರ | 20+1** | ಉತ್ತರಪ್ರದೇಶ | 75+1** |
| ಝಾರ್‌ಖಂಡ್ | 24+2** | ಉತ್ತರಾಖಂಡ್ | 13 |
| ಕರ್ನಾಟಕ | 30+1** | ಪಶ್ಚಿಮ ಬಂಗಾಳ | 19+1** |
| ಕೇರಳ | 14 | ಒಟ್ಟು | 638+20**+3*=661 |

** ಪರಿಶಿಷ್ಟಜಾತಿ, ಪರಿಶಿಷ್ಟಪಂಗಡಗಳ ಜನಸಂಖ್ಯೆ ಹೆಚ್ಚು ಇರುವ ಜಿಲ್ಲೆಗಳಿಗೆ ಹೆಚ್ಚುವರಿ ಜ.ನ.ವಿ.ಗಳನ್ನು ಮಂಜೂರು ಮಾಡಲಾಗಿದೆ. * ವಿಶೇಷ ಜ.ನ.ವಿ.

ಪ್ರತಿ ವಿದ್ಯಾಲಯದಲ್ಲಿಯೂ 6ನೇ ತರಗತಿಗೆ ಆಯ್ಕೆ ಪರೀಕ್ಷೆಯ ಮೂಲಕ ಯೋಗ್ಯ ಅಭ್ಯರ್ಥಿಗಳ ಲಭ್ಯತೆಯನ್ನಾಧರಿಸಿ ಗರಿಷ್ಠ 80 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು. ವಿದ್ಯಾಲಯದಲ್ಲಿ ಸಾಕಷ್ಟು ಸ್ಥಳಾವಕಾಶವಿಲ್ಲದಿದ್ದರೆ ವಿದ್ಯಾರ್ಥಿಗಳ ಸಂಖ್ಯೆಯನ್ನು 40ಕ್ಕೆ ಇಳಿಸುವ ಅಥವಾ ಪ್ರವೇಶ ಪರೀಕ್ಷಾ ಫಲಿತಾಂಶವನ್ನು ಅಥವಾ ಪರೀಕ್ಷೆ ನಡೆಸುವುದನ್ನು ತಡೆಹಿಡಿಯುವ ಅಧಿಕಾರವನ್ನು ಸಮಿತಿಯು ಹೊಂದಿದೆ.

## 1.2 ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ–2022

2022 – 23ನೇ ಸಾಲಿನ ಜವಾಹರ ನವೋದಯ ವಿದ್ಯಾಲಯದ 6ನೇ ತರಗತಿಯ ಪ್ರವೇಶ ಪರೀಕ್ಷೆಯನ್ನು ಶನಿವಾರ ದಿನಾಂಕ 30 ನೇ ಎಪ್ರಿಲ್ 2022 ರಂದು ಬೆಳಿಗ್ಗೆ 11.30 ಗಂಟೆಗೆ ದೇಶದಾದ್ಯಂತ ಒಂದೇ ಹಂತದಲ್ಲಿ ನಡೆಸಲಾಗುವುದು.

**ಗಣಕೀಕೃತ (ಆನ್‌ಲೈನ್) ಅರ್ಜಿ ತುಂಬಲು ಕೊನೆಯ ದಿನಾಂಕ 30 ನೇ ನವೆಂಬರ್ 2021.**

## ಜ. ನ. ವಿ. ಆಯ್ಕೆ ಪರೀಕ್ಷೆಗೆ ಅರ್ಜಿ ಸಲ್ಲಿಸುವುದು ಹೇಗೆ ?

## 2.1 2022 ರ ಜ.ನ.ವಿ. ಪ್ರವೇಶ ಪರೀಕ್ಷೆಗೆ ಗಣಕೀಕೃತ ಅರ್ಜಿ ಸಲ್ಲಿಸುವ ವಿಧಾನ

i) ಜ.ನ.ವಿ. ಪ್ರವೇಶ ಪರೀಕ್ಷೆಗೆ ಗಣಕೀಕೃತ ಅರ್ಜಿ ಸಲ್ಲಿಸಬೇಕು. ಈ ಮೂಲಕ ಅರ್ಜಿ ಸಲ್ಲಿಸುವ ವಿಧಾನವನ್ನು ಸರಳೀಕರಿಸಲಾಗಿದೆ.ನವೋದಯ ವಿದ್ಯಾಲಯ ಸಮಿತಿಯ **www.navodaya.gov.in** ಮತ್ತು **navodaya.gov.in/nvs/en/Admission-JNVST/JNVST-class** ವೆಬ್‌ಸೈಟ್ ಮೂಲಕ ಯಾವುದೇ ಶುಲ್ಕವಿಲ್ಲದೆ ಅರ್ಜಿಸಲ್ಲಿಸಬಹುದು. **ಆಯ್ಕೆಯಾದ ಅಭ್ಯರ್ಥಿಯ ವಿವರವಾದ ಮಾಹಿತಿ ಹಾಗೂ ಪರೀಕ್ಷಿಸುವ ವಿಧಾನಕ್ಕಾಗಿ ವಸತಿ ಪ್ರಮಾಣ ಪತ್ರ, ವಯಸ್ಸು, ಅರ್ಹತೆ ಇತ್ಯಾದಿಗಳನ್ನು ನಿಗಧಿತ ವಿಧಾನದಿಂದ ಅಳೆಯಲಾಗುವುದು.**

ii) ಅರ್ಹ ಅಭ್ಯರ್ಥಿಗಳು ಆನ್ ಲೈನ್ ಅರ್ಜಿಯನ್ನು ಭರ್ತಿ ಮಾಡುವಾಗ ಭಾವ ಚಿತ್ರ, ಅಭ್ಯರ್ಥಿ ಮತ್ತು ಪಾಲಕ/ಪೋಷಕರ ಸಹಿಗಳೊಂದಿಗೆ ಪ್ರಮಾಣ ಪತ್ರವನ್ನು ಅಪ್ ಲೋಡ್ ಮಾಡಬೇಕು. **ಈ ಪ್ರಮಾಣ ಪತ್ರವನ್ನು 10-100 ಕೆಬಿ ಅಳತೆಯ ಜೆಪಿಜಿ ಫಾರ್ಮೆಟ್‌ನಲ್ಲಿ ಅಪ್‌ಲೋಡ್ ಮಾಡಬೇಕು.**

iii) NIOS ನ ಅಭ್ಯರ್ಥಿಗಳಾಗಿದ್ದರೆ, ಅಂಥವರು 'ಬಿ' ಸರ್ಟಿಫಿಕೇಟ್ ಹೊಂದಿರಬೇಕು. ಅವರು ಅದೇ ಜಿಲ್ಲೆಯ ರಹವಾಸಿಯಾಗಿರಬೇಕು.

iv) ಗಣಕೀಕೃತ ಅರ್ಜಿಯು ಸರ್ವರಿಗೂ ಲಭಿಸುವಂತದ್ದು. ಇದಕ್ಕೆ ಯಾವುದೇ ಶುಲ್ಕ ಇರುವುದಿಲ್ಲ. ಈ ಗಣಕೀಕೃತ ಅರ್ಜಿಯನ್ನು ಡೆಸ್ಕ್ ಟಾಪ್, ಲ್ಯಾಪ್ ಟಾಪ್, ಮೊಬೈಲ್, ಟ್ಯಾಬ್ ಇತ್ಯಾದಿ ಯಾವುದೇ ಸಾಧನಗಳ ಮುಖಾಂತರ ಸಲ್ಲಿಸಬಹುದು.

v) ಜವಾಹರ ನವೋದಯ ಪ್ರವೇಶ ಪರೀಕ್ಷೆಯ ಅರ್ಜಿಯನ್ನು ಉಚಿತವಾಗಿ ಅಪ್ಲೋಡ್ ಮಾಡಲು ಎಲ್ಲಾ ಜ ನ ವಿ ಗಳಲ್ಲಿ ಪಾಲಕರ ಸಹಾಯಕ್ಕೆ ಸಹಾಯ ಕೇಂದ್ರವನ್ನು ತೆರೆಯಲಾಗಿದೆ. ಸಹಾಯ ಬಯಸುವ ಪಾಲಕರು ಸಂಬಂಧಿಸಿದ ದಾಖಲೆಯೊಂದಿಗೆ ಅಭ್ಯರ್ಥಿಯ ಜೊತೆಗೆ ಜ.ನ.ವಿ.ಗೆ ಬಂದು ಸಹಾಯ ಪಡೆಯಬಹುದು. ಅಭ್ಯರ್ಥಿಯ ಭಾವಚಿತ್ರ, ಕಾರ್ಯನಿರತ ಮೊಬೈಲ್ ಸಂಖ್ಯೆಯೊಂದಿಗೆ ಬರಬೇಕು. ನೀವು ನೊಂದಾಯಿಸಿದ ಮೊಬೈಲ್ ಸಂಖ್ಯೆಗೆ ಎಸ್.ಎಮ್.ಎಸ್. ಬರುವುದು.

## 2.2 ಪರೀಕ್ಷಾ ಪ್ರವೇಶ ಪತ್ರಗಳ ವಿತರಣೆ:

ಪ್ರವೇಶ ಪತ್ರಗಳನ್ನು ನವೋದಯ ವಿದ್ಯಾಲಯ ಸಮಿತಿಯ, ಅರ್ಜಿಸಲ್ಲಿಸುವ ವೆಬ್‌ಸೈಟ್‌ನಿಂದಲೆ ಪರೀಕ್ಷೆಗೆ ಮುಂಚಿತವಾಗಿ ಕೊಡಲಾಗುವುದು. ಪಾಲಕರು/ ಅಭ್ಯರ್ಥಿಗಳು ಉಚಿತವಾಗಿ ಆಯ್ಕೆ ಪರೀಕ್ಷೆಯ ಪ್ರವೇಶ ಪತ್ರವನ್ನು ಜನವಿ ಪ್ರವೇಶ ಪರೀಕ್ಷೆಯ ಮುಂಚೆ/ಮೊದಲು ಡೌನ್ ಲೋಡ್ ಮಾಡಿಕೊಳ್ಳಬಹುದು.

## 2.3 ಪ್ರವೇಶ ಪರೀಕ್ಷೆಯ ಫಲಿತಾಂಶ:

ಜ.ನ.ವಿ. 6ನೆ ತರಗತಿಯ ಪ್ರವೇಶ ಪರೀಕ್ಷೆ–2022ರ ಫಲಿತಾಂಶ ಪ್ರಕಟಿಸುವ ಅಂದಾಜು ದಿನಾಂಕ ಜೂನ್ 2022. ಅಭ್ಯರ್ಥಿಗಳು ನವೋದಯ ವೆಬ್ ಸೈಟಿನ ಪ್ರವೇಶದ ಪೋರ್ಟಲ್‌ನಲ್ಲಿ ತಮ್ಮ ಫಲಿತಾಂಶವನ್ನು ನೋಡಬಹುದು. ಈ ಕೆಳಗೆ ನಮೂದಿಸಿದ ಕಛೇರಿಗಳಲ್ಲಿ ಫಲಿತಾಂಶವನ್ನು ಪ್ರಕಟಿಸಲಾಗುವುದು.

i) ಜವಾಹರ ನವೋದಯ ವಿದ್ಯಾಲಯ

ii) ಜಿಲ್ಲಾ ಶಿಕ್ಷಣಾಧಿಕಾರಿಗಳ ಕಛೇರಿ

iii) ಜಿಲ್ಲಾಧಿಕಾರಿಗಳ ಕಛೇರಿ

iv) ಉಪ ಆಯುಕ್ತರು, ನವೋದಯ ವಿದ್ಯಾಲಯ ಸಮಿತಿಯ ಕ್ಷೇತ್ರೀಯ ಕಾರ್ಯಾಲಯ.

v) ಫಲಿತಾಂಶವನ್ನು ನವೋದಯ ವಿದ್ಯಾಲಯ ಸಮಿತಿಯ ವೆಬ್ ಸೈಟ್ www.navodaya.gov.in ನಲ್ಲಿಯೂ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಈ ವೆಬ್ ಸೈಟ್ ನಲ್ಲಿ ತಮ್ಮ ಫಲಿತಾಂಶ ನೋಡಬಹುದು. ಸಂಬಂಧಪಟ್ಟ ಜಿಲ್ಲೆಯ ಜವಾಹರ ನವೋದಯ ವಿದ್ಯಾಲಯಗಳ ಪ್ರಾಚಾರ್ಯರು ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ನೋಂದಾಯಿಸಿದ ಮೊಬೈಲ್ ನಂಬರಿಗೆ ಎಸ್. ಎಮ್. ಎಸ್. ಹಾಗೂ ಸ್ಪೀಡ್ ಪೋಸ್ಟ್ ಮೂಲಕ ವಿಷಯ ತಿಳಿಸುವರು.

# ಆಯ್ಕೆ ಮತ್ತು ಪ್ರವೇಶ

**3.1)** ಪರೀಕ್ಷೆಯಲ್ಲಿ ಆಯ್ಕೆಯಾದ ಮಾತ್ರಕ್ಕೆ ಅಭ್ಯರ್ಥಿಗೆ ಜವಾಹರ ನವೋದಯ ವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ಹಕ್ಕು ದೊರೆಯುವುದಿಲ್ಲ. ಪ್ರವೇಶ ಪಡೆಯುವ ಸಮಯದಲ್ಲಿ ಪ್ರತಿಯೊಬ್ಬ ಆಯ್ಕೆಗೊಂಡ ಅಭ್ಯರ್ಥಿಯು ನವೋದಯ ವಿದ್ಯಾಲಯ ಸಮಿತಿಯು ನಿಗದಿಗೊಳಿಸಿರುವ ಎಲ್ಲ ಪ್ರಮಾಣಪತ್ರಗಳನ್ನು ಹಾಜರುಪಡಿಸಬೇಕು. ಪ್ರವೇಶ ಪಡೆಯುವವರೆಗೆ ಆಯ್ಕೆಯು ತಾತ್ಕಾಲಿಕವಾಗಿರುವುದು. ಆಯ್ಕೆಯಾದ ಅಭ್ಯರ್ಥಿಗಳು ಜವಾಹರ ನವೋದಯ ವಿದ್ಯಾಲಯದಿಂದ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರೀಕ್ಷಿಸಿ ದಾಖಲಾತಿಗೆ ದೃಢೀಕರಿಸಿದ ನಂತರ ತಾವು ಓದಿದ ಶಾಲೆಯಿಂದ ಟಿ.ಸಿ.ಗೆ ಅರ್ಜಿ ಸಲ್ಲಿಸಲು ಸೂಚಿಸಲಾಗುವುದು.

3.2) ವಿವಾದಾಸ್ಪದ ಸಂದರ್ಭಗಳಲ್ಲಿ ನವೋದಯ ವಿದ್ಯಾಲಯ ಸಮಿತಿಯ ನಿರ್ಣಯವೇ ಅಂತಿಮವಾದದ್ದು ಹಾಗೂ ಈ ನಿರ್ಣಯಕ್ಕೆ ಎಲ್ಲಾ ಅಭ್ಯರ್ಥಿಗಳು ಬದ್ಧರು.

3.3) ಆಯ್ಕೆಯಾದ / ಆಯ್ಕೆಯಾಗದ ಅಭ್ಯರ್ಥಿಗಳಿಗೆ ಅವರು ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ತಿಳಿಸಲಾಗುವುದಿಲ್ಲ.

3.4) ಉತ್ತರಪತ್ರಿಕೆಗಳ ಪುನರ್ ಮೌಲ್ಯಮಾಪನಕ್ಕಾಗಲಿ, ಅಂಕಗಳ ಮರು ಎಣಿಕೆಗಾಗಲಿ ಅವಕಾಶವಿಲ್ಲ. ಫಲಿತಾಂಶವನ್ನು ಕಂಪ್ಯೂಟರುಗಳ ಮೂಲಕ ಸಿದ್ಧಪಡಿಸುವುದರಿಂದಲೂ ಹಾಗೂ ಫಲಿತಾಂಶದ ಸಂಸ್ಕರಣೆಯಲ್ಲಿ ಅನೇಕ ರೀತಿಯಲ್ಲಿ ತಾಳೆ ನೋಡುವುದರ ಮೂಲಕ ನಿಖರತೆಯನ್ನು ದೃಢಪಡಿಸಿಕೊಳ್ಳಲಾಗುವುದು.

**3.5)** ಪಾಲಕ/ಪೋಷಕರ ಗಮನಕ್ಕೆ ತರಬಯಸುವ ವಿಷಯವೇನೆಂದರೆ ಜವಾಹರ ನವೋದಯ ವಿದ್ಯಾಲಯಗಳ ಯೋಜನೆಯಂತೆ ಹಿಂದಿ ಪ್ರದೇಶದಲ್ಲಿನ ಒಂದು ಜ.ನ.ವಿ. ಯ ವಿದ್ಯಾರ್ಥಿಗಳು ಹಿಂದಿ ಮಾತನಾಡದ ಜ.ನ.ವಿ.ಗೆ ಹಾಗೂ ಹಿಂದಿ ಮಾತನಾಡದ ಪ್ರದೇಶದ ವಿದ್ಯಾಲಯದಿಂದ ಹಿಂದಿ ಮಾತನಾಡುವ ಜ.ನ.ವಿ.ಗೆ ಅವರು 9ನೇ ತರಗತಿಗೆ ಬಂದಾಗ ಒಂದು ವರ್ಷದ ಅವಧಿಗೆ ವಲಸೆ ಹೋಗಬೇಕಾಗಿ ಬರುತ್ತದೆ. ಒಂದು ವೇಳೆ ವಿದ್ಯಾರ್ಥಿಗಳು ವಲಸೆಗೆ ಒಪ್ಪದೆ ಹೋದರೆ ಅಂತಹ ವಿದ್ಯಾರ್ಥಿಗಳಿಗೆ ವಿದ್ಯಾಲಯದಲ್ಲಿ ಮುಂದುವರಿಯಲು ಅವಕಾಶ ನೀಡಲಾಗುವುದಿಲ್ಲ.

3.6) ಪ್ರವೇಶ ಪರೀಕ್ಷೆಯ ಆಧಾರದ ಮೇಲೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಅವರು ಪರೀಕ್ಷೆ ತೆಗೆದುಕೊಂಡ ಜಿಲ್ಲೆಯಲ್ಲಿ ಸ್ಥಾಪಿತವಾಗಿರುವ ಜವಾಹರ ನವೋದಯ ವಿದ್ಯಾಲಯದಲ್ಲಿ ಮಾತ್ರ ಪ್ರವೇಶ ನೀಡಲಾಗುವುದಲ್ಲದೆ ಯಾವುದೇ ಸಂದರ್ಭದಲ್ಲೂ ಬೇರಾವುದೇ ಜ.ನ.ವಿ.ಗಳಲ್ಲೂ ಪ್ರವೇಶ ನೀಡಲಾಗುವುದಿಲ್ಲವೆಂಬ ವಿಚಾರವನ್ನು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ತಿಳಿದಿರಬೇಕು. ಸಂಬಂಧಪಟ್ಟ ಜ.ನ.ವಿ.ಯಲ್ಲಿನ ಬೋಧನಾಮಾಧ್ಯಮದ ಕಾರಣದಿಂದಾಗಲೀ, ತಂದೆ–ತಾಯಿಯರ/ಪೋಷಕರ ವರ್ಗಾವಣೆಯ ಕಾರಣದಿಂದಾಗಲೀ ವಿದ್ಯಾರ್ಥಿಗಳು ತಾವು ಆಯ್ಕೆಯಾಗಿ ಪ್ರವೇಶ ಪಡೆದ ವಿದ್ಯಾಲಯದಿಂದ ಬೇರೊಂದು ಜ.ನ.ವಿ.ಗೆ ವರ್ಗಾಯಿಸಬೇಕೆಂಬ ಯಾವುದೇ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

3.7) ಅಭ್ಯರ್ಥಿಗಳು ಪರಿಶಿಷ್ಟ ಜಾತಿ(SC), ಪರಿಶಿಷ್ಟ ವರ್ಗ(ST) ಮತ್ತು ಇತರೆ ಹಿಂದುಳಿದ ವರ್ಗಕ್ಕೆ (OBC) ಸೇರಿದವರಾಗಿದ್ದರೆ, ಆಯ್ಕೆಯಾದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಪ್ರವೇಶ ಪಡೆಯುವ ಸಮಯದಲ್ಲಿ ಸಲ್ಲಿಸಬೇಕು. ಇತರೆ ಹಿಂದುಳಿದ ವರ್ಗದ ಅಡಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಕೇಂದ್ರ ಸರ್ಕಾರದ ಕೇಂದ್ರದ ಜಾತಿವಾರು ಪಟ್ಟಿಯ Central list (Copy Annexed) ನಿಗದಿತ ನಮೂನೆಯಲ್ಲಿ ಇತರೆ ಹಿಂದುಳಿದ ವರ್ಗಗಳ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಈ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪ್ರವೇಶ ಬಯಸಿದ ವರ್ಷದ ಮಾರ್ಚ್ 30ರೊಳಗೆ ಪಡೆದಿರಬೇಕು. ಆಯ್ಕೆಯಾದ ಪಕ್ಷದಲ್ಲಿ ಪ್ರವೇಶ ಪಡೆಯುವ ಸಮಯದಲ್ಲಿ ಆಯ್ಕೆಯಾದ ಜಿಲ್ಲೆಯ ಜ.ನ.ವಿ.ಯ ಪ್ರಾಚಾರ್ಯರಿಗೆ ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಇದನ್ನು ಪ್ರಸ್ತುತ ಪಡಿಸಬೇಕು. ಉದಾಹರಣೆ 2022-23 ನೇ ಸಾಲಿನಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಯು 2022 ರ ಮಾರ್ಚ್ 30 ರಂದು ಅಥವಾ ಅದಕ್ಕೆ ಮುಂಚೆ ಪ್ರಮಾಣ ಪತ್ರ ಪಡೆದಿರಬೇಕು.

3.8) ಗ್ರಾಮೀಣ ಪ್ರದೇಶದಡಿ ಅರ್ಜಿಸಲ್ಲಿಸಬಯಸುವ ಅಭ್ಯರ್ಥಿಗಳು 3,4 ಮತ್ತು 5 ನೇ ತರಗತಿ ಓದಿದ ಶಾಲೆ ಗ್ರಾಮೀಣ ಪ್ರದೇಶದಲ್ಲಿರುವ ಪ್ರಮಾಣಪತ್ರ ಸಲ್ಲಿಸಬೇಕು.

3.9) ಆಯ್ಕೆಯಾದ ದಿವ್ಯಾಂಗ ಅಭ್ಯರ್ಥಿಯು (ಅಸ್ತಿ ವಿಕಲ(ಆರ್ಥೋಪಿಡಿಕ್), ಕಿವುಡ ಮತ್ತು ಕುರುಡ ) ಪ್ರವೇಶದ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ವೈದ್ಯಾಧಿಕಾರಿಗಳಿಂದ ತಮ್ಮ ಅಂಗವಿಕಲತೆಗೆ ಸಂಬಂಧಪಟ್ಟ ಪ್ರಮಾಣಪತ್ರವನ್ನು ಪ್ರಸ್ತುತ ಪಡಿಸಬೇಕು.

3.10) ಟ್ರಾನ್ಸ್‌ಜಂಡರ್ ಅಭ್ಯರ್ಥಿಗಳು 5ನೇ ತರಗತಿಯನ್ನು ಪೂರ್ಣಾವಧಿಯಲ್ಲಿ ಓದುತ್ತಿರುವ ಜಿಲ್ಲೆಯಲ್ಲೇ ಅರ್ಜಿ ಸಲ್ಲಿಸಬೇಕು. ಟ್ರಾನ್ಸ್‌ಜಂಡರ್ ವರ್ಗಕ್ಕೆ ಸಂಬಂಧಪಟ್ಟ ಅಭ್ಯರ್ಥಿಗಳು ಅದಕ್ಕೆ ಸಂಬಂಧಿಸಿದ ರಾಜ್ಯ ಸರ್ಕಾರಿ ಅಧಿಕಾರಿಗಳಿಂದ ತಮ್ಮ ಲಿಂಗ ಸಂಬಂಧಿ ಪ್ರಮಾಣಪತ್ರವನ್ನು ಪಡೆದು ಸಲ್ಲಿಸಬೇಕು. ಈ ವರ್ಗಕ್ಕೆ ಯಾವುದೇ ಮೀಸಲಾತಿ ಇರುವುದಿಲ್ಲ.

## ಯಾರು ಅರ್ಹರು ?

### ಎಲ್ಲಾ ಅಭ್ಯರ್ಥಿಗಳಿಗೆ:

4.1) ಯಾವ ಜಿಲ್ಲೆಯಲ್ಲಿ ಜವಾಹರ ನವೋದಯ ವಿದ್ಯಾಲಯವು ಸ್ಥಾಪಿಸಲ್ಪಟ್ಟಿದೆಯೋ ಆ ಜಿಲ್ಲೆಯ ಅಭ್ಯರ್ಥಿಗಳು ಮಾತ್ರ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಲು ಅರ್ಹರು. ಅಲ್ಲದೇ ಜ.ನ.ವಿ. ಪ್ರಾರಂಭವಾದ ಜಿಲ್ಲೆಯು ನಂತರ ವಿಭಜನೆಗೊಂಡ ಜಿಲ್ಲಾಕ್ಷೇತ್ರದಲ್ಲಿ ಒಂದು ಹೊಸ ವಿದ್ಯಾಲಯವು ಪ್ರಾರಂಭವಾಗದಿದ್ದ ಸಂದರ್ಭದಲ್ಲಿ ವಿದ್ಯಾಲಯವು ಮೊದಲಿದ್ದ ಜಿಲ್ಲಾ ಕ್ಷೇತ್ರದಲ್ಲಿ ಬರುವ ಜ.ನ.ವಿ. ಪ್ರವೇಶ ಪರೀಕ್ಷೆಗೆ ಕುಳಿತು ಕೊಳ್ಳಲು ಅಭ್ಯರ್ಥಿಯು ಅರ್ಹನಾಗಿರುತ್ತಾನೆ.

4.2) ಪ್ರವೇಶ ಪಡೆಯಲು ಇಚ್ಛಿಸುವ ಅಭ್ಯರ್ಥಿಯು **01.05.2009 ಕ್ಕಿಂತ ಮೊದಲು ಮತ್ತು 30.04.2013 ರ (ಎರಡೂ ದಿನಗಳೂ ಸೇರಿ) ನಂತರ ಜನಿಸಿದವರಾಗಿರಬಾರದು.** ಇದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ಎಸ್.ಸಿ/ಎಸ್.ಟಿ) ಒಳಗೊಂಡಂತೆ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಒಂದು ವೇಳೆ ಪ್ರವೇಶ ಪಡೆಯಬಯಸುವ ಅಭ್ಯರ್ಥಿಯ ವಯಸ್ಸು ಮೀರಿದೆ ಎಂಬ ಅನುಮಾನವಿದ್ದರೆ, ಅದನ್ನು ಖಚಿತ ಪಡಿಸಿಕೊಳ್ಳಲು ವೈದ್ಯಕೀಯ ಮಂಡಳಿಗೆ ನಿರ್ದೇಶಿಸಬಹುದು. ವೈದ್ಯಕೀಯ ಮಂಡಳಿಯ ತೀರ್ಮಾನವೇ ಅಂತಿಮವಾದುದು.

4.3)ಅಭ್ಯರ್ಥಿಗಳು ಯಾವ ಜಿಲ್ಲೆಯ ಜವಾಹರ ನವೋದಯ ವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ಇಚ್ಛಿಸುತ್ತಾರೋ ಅವರು ಅದೇ ಜಿಲ್ಲೆಯ ಯಾವುದಾದರೊಂದು ಸರಕಾರಿ ಶಾಲೆ ಅಥವಾ ಸರಕಾರದಿಂದ ಅನುದಾನ ಪಡೆದ, 'ಬಿ' ಪ್ರಮಾಣ ಪತ್ರದ ಕೋರ್ಸಿನ ರಾಷ್ಟ್ರೀಯ ಮುಕ್ತ ಶಾಲಾ ಸಂಸ್ಥೆಯಲ್ಲಿ ( National Institute of Open Schooling ) **2021-22**ರ ಶೈಕ್ಷಣಿಕ ವರ್ಷದಲ್ಲಿ 5ನೇ ತರಗತಿಯಲ್ಲಿ ಓದಿದವರಾಗಿರಬೇಕು. ಈ ಶಾಲೆಗಳು ಸರ್ಕಾರದಿಂದಾಗಲಿ ಅಥವಾ ಸರ್ಕಾರದ ಅನುಮತಿಯಿಂದ ನಡೆಯುತ್ತಿರುವ ಸಂಸ್ಥೆಗಳಿಂದಾಗಲಿ, ಸರ್ಕಾರದ ಮಾನ್ಯತೆ ಪಡೆದು ನಡೆಯುತ್ತಿರಬೇಕು. ಯಾವ ಅಭ್ಯರ್ಥಿಗಳು 'ಬಿ' ಪ್ರಮಾಣಪತ್ರವನ್ನು NIOSನಿಂದ ಪಡೆದಿರುವರೋ ಅವರು NIOSನ ದೃಢೀಕರಣ ಪತ್ರ ಹೊಂದಿರಬೇಕು. ಅಭ್ಯರ್ಥಿಯು 5ನೇ ತರಗತಿಯನ್ನು **2021-22** ನೇ ಸಾಲಿನಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿರಬೇಕು. ಇಂಥ ಅಭ್ಯರ್ಥಿಗಳು **2022-23**ನೇ ಸಾಲಿನಲ್ಲಿ 6 ನೇ ತರಗತಿಗೆ ನಿಜವಾಗಿ ಪ್ರವೇಶ ಪಡೆಯಬೇಕಾದರೆ ಮೇಲೆ ತಿಳಿಸಿರುವ ಈ ಷರತ್ತುಗಳಿಗೆ ಅವರು ಬದ್ಧರಾಗಿರಬೇಕು.

4.4) ಅಭ್ಯರ್ಥಿಯು ಗ್ರಾಮೀಣಕ್ಷೇತ್ರದಿಂದ ಪ್ರವೇಶ ಬಯಸಿದ್ದಾದರೆ, ಅಂತಹ ಅಭ್ಯರ್ಥಿಯು 3 ನೇ, 4 ನೇ ಹಾಗೂ 5 ನೇ ತರಗತಿಗಳನ್ನು ಸರಕಾರಿ / ಸರಕಾರಿ ಅನುದಾನಿತ /ಸರಕಾರದಿಂದ ಮಾನ್ಯತೆ ಪಡೆದ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿಯೇ ಪೂರ್ಣ ಶೈಕ್ಷಣಿಕ ವರ್ಷಗಳನ್ನು ಪೂರ್ಣಗೊಳಿಸಿರಬೇಕು.

4.5)ಯಾವ ಅಭ್ಯರ್ಥಿಗಳು 5ನೇ ತರಗತಿಯನ್ನು 30ನೇ ಸೆಪ್ಟಂಬರ್, 2021ರ ಒಳಗಾಗಿ NIOS ನ ಸ್ಪರ್ಧಾ 'ಬಿ' ಸರ್ಟಿಫಿಕೇಟ್ ಕೋರ್ಸ್ ಪರೀಕ್ಷೆಯ ಮೂಲಕ ಉತ್ತೀರ್ಣರಾಗಿರುವರೋ ಅವರಿಗೆ ವಯೋಮಿತಿ ಆಧಾರದ ಮೇಲೆ ಪ್ರವೇಶ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲಾಗುವುದು. ಇಂತಹ ಅಭ್ಯರ್ಥಿಗಳ ಅರ್ಜಿಗಳನ್ನು DEO/DIOSನ ಅಧಿಕಾರಿಗಳು ತಪಾಸಣೆ ಮಾಡುವರು. ಅಭ್ಯರ್ಥಿಯು ಸತತ ಮೂರು ವರ್ಷಗಳಿಂದ ಗ್ರಾಮೀಣ ಪ್ರದೇಶದಲ್ಲಿ ಇರುವ NIOS ಶಾಲೆಯಲ್ಲಿ ಓದುತ್ತಿದ್ದಾನೆಂಬ ದೃಢೀಕೃತ ಪ್ರಮಾಣಪತ್ರದ ಆಧಾರದ ಮೇಲೆ ಅಭ್ಯರ್ಥಿತ್ವವನ್ನು ದೃಢೀಕರಿಸಲಾಗುವುದು. ಈ ಪ್ರಮಾಣಪತ್ರವನ್ನು ಜಿಲ್ಲಾ ದಂಡಾಧಿಕಾರಿಗಳು/ತಹಸೀಲ್ದಾರರಿಂದ ಪಡೆಯತಕ್ಕದ್ದು. ಈ ಯೋಜನೆಯ ಅಡಿಯಲ್ಲಿ ಅಭ್ಯರ್ಥಿಯು ನಗರ ಪ್ರದೇಶದಲ್ಲಿ ಓದುತ್ತಿದ್ದರೆ ಅವನು ಗ್ರಾಮೀಣ ಕ್ಷೇತ್ರ ಕೋಟಾದಡಿಯಲ್ಲಿ ಸ್ಥಾನ ಪಡೆಯಲಾರನು.

4.6) ಯಾವ ಅಭ್ಯರ್ಥಿಯು 5ನೇ ತರಗತಿಗೆ **15 ಸೆಪ್ಟಂಬರ್ 2021**ರ ಒಳಗಾಗಿ ಪ್ರವೇಶ ಪಡೆದಿರುವುದಿಲ್ಲವೊ ಅವನು / ಅವಳು ಈ ಪರೀಕ್ಷೆ ಬರೆಯಲು ಅರ್ಹರಲ್ಲ.

4.7) **ಯಾವುದೇ ಸಂದರ್ಭದಲ್ಲಿಯೂ ಅಭ್ಯರ್ಥಿಗೆ ಎರಡನೇ ಬಾರಿಗೆ ಆಯ್ಕೆ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವಿಲ್ಲ.**

## ಗ್ರಾಮೀಣ ಅಭ್ಯರ್ಥಿಗಳಿಗಾಗಿ

ಎ) ಪ್ರತಿಯೊಂದು ಜಿಲ್ಲೆಯಲ್ಲೂ ಕನಿಷ್ಟಪಕ್ಷ ಶೇ. 75 ರಷ್ಟು ಸ್ಥಾನಗಳನ್ನು ಗ್ರಾಮೀಣ ಕ್ಷೇತ್ರಗಳಿಂದ ಆಯ್ಕೆ ಮಾಡಲಾದ ಅಭ್ಯರ್ಥಿಗಳಿಂದಲೂ ಮತ್ತು ಉಳಿದ ಸ್ಥಾನಗಳನ್ನು ಜಿಲ್ಲೆಯ ನಗರ ಕ್ಷೇತ್ರಗಳಿಂದ ಆಯ್ಕೆಯಾದ ಅಭ್ಯರ್ಥಿಗಳಿಂದಲೂ ತುಂಬಲಾಗುವುದು.

ಬಿ) ಗ್ರಾಮೀಣ ಕ್ಷೇತ್ರದಿಂದ ಆಯ್ಕೆ ಪಡೆಯಲು ಇಚ್ಛಿಸುವ ಅಭ್ಯರ್ಥಿಯು ಗ್ರಾಮೀಣ ಪ್ರದೇಶದಲ್ಲಿನ ಸರಕಾರಿ / ಸರಕಾರಿ ಅನುದಾನಿತ /ಸರಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 3ನೇ, 4ನೇ ಮತ್ತು 5ನೇ ತರಗತಿಗಳಲ್ಲಿ ಪ್ರತಿ ಶೈಕ್ಷಣಿಕ ವರ್ಷದಲ್ಲೂ, ಪೂರ್ಣ ವ್ಯಾಸಂಗ ಮಾಡಿರಬೇಕು. **ಅರ್ಜಿ ಸಲ್ಲಿಸ ಬಯಸುವ ಜಿಲ್ಲೆಯಲ್ಲಿ 5 ನೇ ತರಗತಿಯಲ್ಲಿ ಪೂರ್ಣವ್ಯಾಸಂಗ ಮಾಡಿರಬೇಕು.**

ಸಿ) NIOSನ ಯೋಜನೆಯಡಿಯಲ್ಲಿ ಓದಿದ ಅಭ್ಯರ್ಥಿಗಳು ಜಿಲ್ಲಾ ದಂಡಾಧಿಕಾರಿಗಳಿಂದ/ತಹಶೀಲ್ದಾರರಿಂದ/BDO ರವರಿಂದ ಪಡೆದ ಗ್ರಾಮೀಣ ಕ್ಷೇತ್ರದ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

## ನಗರಪ್ರದೇಶದ ಅಭ್ಯರ್ಥಿಗಳಿಗಾಗಿ

ಒಬ್ಬ ಅಭ್ಯರ್ಥಿಯು ನಗರಕ್ಷೇತ್ರದಲ್ಲಿ ಸ್ಥಾಪಿತವಾಗಿರುವ ಶಾಲೆಯಲ್ಲಿ 3ನೇ, 4ನೇ ಹಾಗೂ 5ನೇ ತರಗತಿಗಳಲ್ಲಿ ಯಾವುದೇ ಶೈಕ್ಷಣಿಕ ವರ್ಷದಲ್ಲಿ ಒಂದೇ ಒಂದು ದಿವಸ ಓದಿದ್ದರೂ ಅಂತಹ ಅಭ್ಯರ್ಥಿಯನ್ನು ನಗರಕ್ಷೇತ್ರದ ಅಭ್ಯರ್ಥಿ ಎಂದು ಪರಿಗಣಿಸಲಾಗುವುದು. **2011** ರ ಜನಗಣತಿಯ ಪ್ರಕಾರ ಅಥವಾ ತರುವಾಯ ಸರಕಾರದ ಅಧಿಸೂಚನೆಯ ಮೇರೆಗೆ ಘೋಷಿಸಲಾದ ಪ್ರದೇಶಗಳನ್ನು ನಗರ ಪ್ರದೇಶಗಳೆಂದು ಪರಿಗಣಿಸಲಾಗುವುದು. ಇನ್ನುಳಿದ ಪ್ರದೇಶಗಳನ್ನು ಗ್ರಾಮೀಣವೆಂದು ಪರಿಗಣಿಸಲಾಗುವುದು.

## ಟ್ರಾನ್ಸ್‌ಜಂಡರ್ ಅಭ್ಯರ್ಥಿಗಳಿಗಾಗಿ

ಟ್ರಾನ್ಸ್‌ಜಂಡರ್ ಅಭ್ಯರ್ಥಿಗಳಿಗೆ ಪ್ರತ್ಯೇಕ ಮೀಸಲಾತಿ ಸೌಲಭ್ಯ ಇರುವುದಿಲ್ಲ. ಇವರನ್ನು ಬಾಲಕರ ವರ್ಗದಲ್ಲಿ ಮೀಸಲಾತಿ ಉದ್ದೇಶಕ್ಕಾಗಿ ಸೇರಿಸಲಾಗುವುದು. ಇವರಿಗೆ ಗ್ರಾಮೀಣ-ನಗರ, ಪರಿಶಿಷ್ಟಜಾತಿ,ಪರಿಶಿಷ್ಟಪಂಗಡ, ಇತರೆ ಹಿಂದುಳಿದ ವರ್ಗಗಳು ಮತ್ತು ದಿವ್ಯಾಂಗ ವರ್ಗಗಳ ಮೀಸಲಾತಿಯು ಯಥಾವತ್ತಾಗಿರುತ್ತದೆ.

## ಸ್ಥಾನಗಳ ಮೀಸಲಾತಿ

ಎ) ಜಿಲ್ಲೆಯ ಕನಿಷ್ಟ ಶೇ.75 ರಷ್ಟು ಸ್ಥಾನಗಳನ್ನು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಹಾಗೂ ಇನ್ನುಳಿದ ಸ್ಥಾನಗಳನ್ನು ನಗರ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಾಗಿರಿಸಲಾಗಿದೆ.

ಬಿ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಕ್ಕಳಿಗೆ ಮೀಸಲಾತಿ ಸ್ಥಾನಗಳು ಸಂಬಂಧಿಸಿದ ಜಿಲ್ಲೆಯ ಅವರ ಜನಸಂಖ್ಯೆಯ ಆಧಾರದ ಮೇಲೆ ಅವಲಂಬಿಸಿದೆ. ಆದರೆ ಯಾವ ಜಿಲ್ಲೆಯಲ್ಲಿಯೂ ಇದರ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ (15% ಪರಿಶಿಷ್ಟ ಜಾತಿ ಮತ್ತು 7.5% ಪರಿಶಿಷ್ಟ ಪಂಗಡ) ಕಡಿಮೆ ಇರುವಂತಿಲ್ಲ. ಇವೆರಡು ವರ್ಗಗಳಿಗೆ ಶೇ. 50 ರಷ್ಟು ಸ್ಥಾನಗಳು ಗರಿಷ್ಠ ಪ್ರಮಾಣದಲ್ಲಿ ಇರುತ್ತವೆ. ಇವೆರಡು ವರ್ಗಗಳಲ್ಲಿ ಸ್ಥಾನಗಳ ಹಂಚಿಕೆ ಪರಸ್ಪರ ಹೆಚ್ಚು ಕಡಿಮೆಯಾಗಬಹುದು. ಓಪನ್ ಮೆರಿಟ್‌ನಿಂದ ಈ ವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಇದರಲ್ಲಿ ಪರಿಗಣಿಸಲಾಗುವುದಿಲ್ಲ.

ಸಿ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೀಸಲಾತಿ ಹೊರತು ಪಡಿಸಿ ಇತರೆ ಹಿಂದುಳಿದ ವರ್ಗಕ್ಕೆ ಶೇ 27ರಷ್ಟು ಮೀಸಲಾತಿಯನ್ನು ನೀಡಲಾಗಿದೆ. ಕಾಲಕಾಲಕ್ಕೆ ಅನ್ವಯವಾಗುವಂತೆ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಮೀಸಲಾತಿಯನ್ನು ಕೇಂದ್ರ ಪಟ್ಟಿಯ ಪ್ರಕಾರ ಅನುಷ್ಠಾನಗೊಳಿಸಲಾಗುತ್ತದೆ. ಈ ಪಟ್ಟಿಯಲ್ಲಿ ಬಾರದಿರುವ ಅಭ್ಯರ್ಥಿಗಳು ಸಾಮಾನ್ಯ ವರ್ಗದಲ್ಲಿ ಅರ್ಜಿ ಸಲ್ಲಿಸಬಹುದು.

ಡಿ) ಒಟ್ಟು ಸ್ಥಾನಗಳಲ್ಲಿ ಕನಿಷ್ಟ 1/3 ಭಾಗದಷ್ಟು ಬಾಲಕಿಯರನ್ನು ತುಂಬಲಾಗುವುದು.

ಇ) ಭಾರತ ಸರ್ಕಾರದ ಮಾನದಂಡದ ಪ್ರಕಾರ ದಿವ್ಯಾಂಗ (ಅಸ್ಥಿವಿಕಲರು (ಆರ್ಥೋಪಿಡಿಕ್), ಕಿವುಡರು,ಕುರುಡರು) ಮಕ್ಕಳಿಗೆ ಮೀಸಲಾತಿಗೆ ಅವಕಾಶವಿದೆ.

** **ಕುರುಡುತನ** : ಈ ಕೆಳಗಿನ ದೋಷಗಳನ್ನೊಳಗೊಂಡ ಯಾವುದೇ ಒಬ್ಬ ವ್ಯಕ್ತಿಯನ್ನು ಕುರುಡನೆಂದು ಪರಿಗಣಿಸಲಾಗುವುದು.

i) ಸಂಪೂರ್ಣ ದೃಷ್ಟಿಹೀನ ಅಥವಾ

ii) ಉತ್ತಮ ಕಣ್ಣಿನ ದೃಷ್ಟಿಶಕ್ತಿಯು ಕರೆಕ್ಟಿಂಗ್ ಲೆನ್ಸೆಸ್ ಸಹಾಯದಿಂದ ಪರೀಕ್ಷಿಸಿದಾಗ ದೃಷ್ಟಿ ಸಾಮರ್ಥ್ಯ 6/60 ಅಥವಾ 20/200 (ಸ್ನೆಲ್ಲೆನ್) ಕ್ಕಿಂತ ಹೆಚ್ಚಿರಬಾರದು. ಅಥವಾ

iii) ಫೀಲ್ಡ್ ಆಫ್ ವಿಷನ್ ( ದೃಷ್ಟಿಕ್ಷೇತ್ರ) ನಲ್ಲಿ 20 ಡಿಗ್ರಿ ಅಥವಾ ಅದಕ್ಕಿಂತ ಕ್ಷೀಣವಾಗಿದ್ದರೆ.

** **ಕಿವುಡುತನ** : ಸಂಭಾಷಣೆಯ ಸಂದರ್ಭದಲ್ಲಿ ಉತ್ತಮ ಶ್ರವಣಶಕ್ತಿಯುಳ್ಳವನು 60 ಡೆಸಿಬಲ್ಸ್ (ಫ್ರೀಕ್ವೆನ್ಸಿ) ಅಥವಾ ಅದಕ್ಕಿಂತ ಹೆಚ್ಚು ಕೇಳುವ ಸಾಮರ್ಥ್ಯವನ್ನು ಕಳೆದುಕೊಂಡಿರಬೇಕು.

** **ಚಲನ ವೈಕಲ್ಯ** : ಅಂಗಾಂಗಗಳು ಚಲಿಸದಂತಾಗಲು ಕಾರಣವಾದ ಎಲುಬು, ಕೀಲು ಮತ್ತು ಮಾಂಸಖಂಡದ ವಿಕಲತೆ ಅಥವಾ ಯಾವುದೇ ರೀತಿಯ ಸೆರೆಬ್ರೆಲ್ ಪಾಲ್ಸಿ ಇರಬೇಕು.

** **ಅಂಗವಿಕಲ ವ್ಯಕ್ತಿ :** ಯಾವುದೇ ಒಬ್ಬ ವ್ಯಕ್ತಿ ಶೇ. 40 ರಷ್ಟು ಅಥವಾ ಅದಕ್ಕಿಂತ ಹೆಚ್ಚಾಗಿ ಅಂಗವಿಕಲನಾಗಿರಬೇಕು. ಅಂತಹ ವ್ಯಕ್ತಿಯನ್ನು ವೈದ್ಯಾಧಿಕಾರಿಗಳು ಅಂಗವಿಕಲನೆಂದು ದೃಢೀಕರಿಸಿದ ನಂತರ, ಅವನನ್ನು ಅಂಗವಿಕಲನೆಂದು ಪರಿಗಣಿಸಲಾಗುವುದು.

## ಆಯ್ಕೆ ನಂತರ ಈ ಕೆಳಗಿನ ದಾಖಲಾತಿಗಳನ್ನು ಸಲ್ಲಿಸಬೇಕು

ಪ್ರವೇಶ ಪರೀಕ್ಷೆಯಲ್ಲಿ ತಾತ್ಕಾಲಿಕವಾಗಿ ಆಯ್ಕೆಯಾದ ಅಭ್ಯರ್ಥಿಯ ಪಾಲಕರು ತಮ್ಮ ಮಗುವಿನ ದಾಖಲಾತಿ ಸಮಯದಲ್ಲಿ ಕೆಳಗಿನ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

i) ಜನ್ಮದಿನಾಂಕದ ದಾಖಲಾತಿಗಳು

ii) ನವೋದಯ ವಿದ್ಯಾಲಯ ಸಮಿತಿಯ ನಿಬಂಧನೆಗಳ ಪ್ರಕಾರ ಅರ್ಹತಾ ದಾಖಲೆಗಳು.

iii) ಗ್ರಾಮೀಣ ಪ್ರದೇಶದಿಂದ ಆಯ್ಕೆಯಾಗಿ ಪ್ರವೇಶ ಬಯಸುವ ಅಭ್ಯರ್ಥಿಗಳ ಪಾಲಕರು ತಮ್ಮ ಮಗು ಗ್ರಾಮೀಣ ಪ್ರದೇಶದಲ್ಲಿಯ ಶಾಲೆಯಲ್ಲಿಯೇ ಓದಿದ್ದಾನೆ ಮತ್ತು ಆ ಶಾಲೆ ಗ್ರಾಮೀಣ ಪ್ರದೇಶದಲ್ಲಿಯೇ ಇದೆ ಎಂಬುದನ್ನು ಅದರಲ್ಲಿ ದೃಢೀಕರಿಸಬೇಕು.

iv) NIOS ಅಭ್ಯರ್ಥಿಯು ನಿಗದಿತ ನಮೂನೆಯಲ್ಲಿರುವ ವಾಸಸ್ಥಾನ ಪ್ರಮಾಣ ಪತ್ರ ಸಲ್ಲಿಸಬೇಕು.

v) ಬೇಕಾದ ಇನ್ನಿತರೇ ಯಾವುದಾದರೂ ದಾಖಲೆಗಳು

## ಆಯ್ಕೆ ಪರೀಕ್ಷೆಯ ಕುರಿತು

### 1. ಪರೀಕ್ಷಾ ಕೇಂದ್ರ:

ಪ್ರತಿಯೊಬ್ಬ ಅಭ್ಯರ್ಥಿಯು ಅವನು ಪ್ರವೇಶ ಪತ್ರದಲ್ಲಿ ಸೂಚಿಸಿದಂತೆ ಅವನಿಗೆ ನೀಡಲಾದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ಬರೆಯಬೇಕು. ಯಾವುದೇ ಅಭ್ಯರ್ಥಿಗಳು ನಿಗದಿ ಪಡಿಸಿದ ಪರೀಕ್ಷಾ ಕೇಂದ್ರದ ಹೊರತು ಬೇರೆ ಯಾವ ಪರೀಕ್ಷಾ ಕೇಂದ್ರದಿಂದಲೂ ಪರೀಕ್ಷೆ ಬರೆಯಲು ಅವಕಾಶ ಇರುವುದಿಲ್ಲ. ಪರೀಕ್ಷಾ ಕೇಂದ್ರದ ಬದಲಾವಣೆಗಾಗಿ ಬರುವ ಯಾವುದೇ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ. ಸೂಕ್ತ ಪ್ರವೇಶ ಪತ್ರವಿಲ್ಲದ ಅಭ್ಯರ್ಥಿಯು ಪರೀಕ್ಷೆಗೆ ಕುಳಿತುಕೊಳ್ಳುವಂತಿಲ್ಲ. ಪ್ರವೇಶ ಪತ್ರಗಳನ್ನು ನವೋದಯ ವಿದ್ಯಾಲಯ ಸಮಿತಿಯ ಕೇಂದ್ರ ಕಛೇರಿಯ ವೆಬ್ ಸೈಟ್ www.navodaya.gov.in ನಿಂದ ಪಡೆಯಬಹುದು.

### 2. ಪರೀಕ್ಷಾ ಮಾಧ್ಯಮ:

ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆಯನ್ನು ಕೆಳಗೆ ನಮೂದಿಸಿದ ರಾಜ್ಯವಾರು ಭಾಷೆಗಳಲ್ಲಿ ನಡೆಸಲಾಗುವುದು.

| ರಾಜ್ಯದ ಹೆಸರು | ಭಾಷೆ |
|---|---|
| ಅಂದಮಾನ್ ಮತ್ತು ನಿಕೊಬಾರ್ ದ್ವೀಪ | ಹಿಂದಿ, ಇಂಗ್ಲೀಷ, ತಮಿಳು, ಉರ್ದು, ಬೆಂಗಾಲಿ |
| ಆಂದ್ರಪ್ರದೇಶ | ಹಿಂದಿ, ಇಂಗ್ಲೀಷ, ತೆಲುಗು, ಮರಾಠಿ, ಉರ್ದು, ಒರಿಯಾ, ಕನ್ನಡ |
| ಅರುಣಾಚಲ ಪ್ರದೇಶ | ಇಂಗ್ಲೀಷ, ಹಿಂದಿ |
| ಅಸ್ಸಾಮ್ | ಇಂಗ್ಲೀಷ, ಹಿಂದಿ, ಅಸ್ಸಾಮಿ, ಬೋಡಾ, ಗರೋ, ಬೆಂಗಾಲಿ, ಮಣಿಪುರಿ (ಬಂಗ್ಲಾ ಲಿಪಿ),ಮಣಿಪುರಿ(ಮೈಥಿ ಮಾಯೇಕ್) |
| ಬಿಹಾರ | ಇಂಗ್ಲೀಷ, ಹಿಂದಿ, ಉರ್ದು |
| ಚಂಡಿಗರ್ | ಇಂಗ್ಲೀಷ, ಹಿಂದಿ, ಪಂಜಾಬಿ |
| ಛತ್ತೀಸಘರ್ | ಇಂಗ್ಲೀಷ, ಹಿಂದಿ, |
| ದೆಹಲಿ | ಇಂಗ್ಲೀಷ, ಹಿಂದಿ, |
| ಗೋವಾ | ಇಂಗ್ಲೀಷ, ಹಿಂದಿ, ಮರಾಠಿ, ಕನ್ನಡ |
| ಗುಜರಾತ | ಇಂಗ್ಲೀಷ, ಹಿಂದಿ, ಗುಜರಾತಿ, ಮರಾಠಿ |
| ಹರಿಯಾಣ | ಇಂಗ್ಲೀಷ, ಹಿಂದಿ, |
| ಹಿಮಾಚಲ ಪ್ರದೇಶ | ಇಂಗ್ಲೀಷ, ಹಿಂದಿ, |
| ಜಮ್ಮು ಮತ್ತು ಕಾಶ್ಮೀರ | ಇಂಗ್ಲೀಷ, ಹಿಂದಿ, ಉರ್ದು |

| | |
|---|---|
| ಝಾರ್ಖಂಡ | ಇಂಗ್ಲೀಷ, ಹಿಂದಿ, ಉರ್ದು, ಒರಿಯಾ |
| ಕರ್ನಾಟಕ | ಇಂಗ್ಲೀಷ, ಹಿಂದಿ, ಕನ್ನಡ, ತೆಲುಗು, ಮರಾಠಿ, ಉರ್ದು, ಮಲಯಾಳಮ್, ತಮಿಳ್ |
| ಕೇರಳ | ಇಂಗ್ಲೀಷ, ಹಿಂದಿ, ಮಲಯಾಳಮ್, ತಮಿಳ್, ಕನ್ನಡ |
| ಲಕ್ಷದ್ವೀಪ್ | ಇಂಗ್ಲೀಷ, ಹಿಂದಿ, ಮಲಯಾಳಮ್ |
| ಮಧ್ಯಪ್ರದೇಶ | ಇಂಗ್ಲೀಷ, ಹಿಂದಿ, ಉರ್ದು, ಮರಾಠಿ, ಗುಜರಾತಿ |
| ಮಹಾರಾಷ್ಟ್ರ | ಇಂಗ್ಲೀಷ, ಹಿಂದಿ, ಕನ್ನಡ, ಮರಾಠಿ, ಉರ್ದು, ತೆಲುಗು, ಗುಜರಾತಿ |
| ಮಣಿಪುರ | ಇಂಗ್ಲೀಷ, ಹಿಂದಿ, ಮಣಿಪುರಿ (ಮೈಥಿ ಮಾಯೇಕ್) |
| ಮೆಘಾಲಯ | ಇಂಗ್ಲೀಷ, ಹಿಂದಿ, ಖಾಸಿ, ಗಾರೋ, ಬೆಂಗಾಲಿ, ಅಸ್ಸಾಮಿ |
| ಮಿಜೋರಾಮ್ | ಇಂಗ್ಲೀಷ, ಹಿಂದಿ, ಮಿಜೊ |
| ನಾಗಾಲ್ಯಾಂಡ್ | ಇಂಗ್ಲೀಷ, ಹಿಂದಿ |
| ಒಡಿಸಾ | ಇಂಗ್ಲೀಷ, ಹಿಂದಿ, ತೆಲುಗು, ಒರಿಯಾ, ಉರ್ದು |
| ಪಾಂಡಿಚರಿ | ಇಂಗ್ಲೀಷ, ಹಿಂದಿ, ತೆಲುಗು, ಮಳಯಾಳಮ್, ತಮಿಳ್ |
| ಪಂಜಾಬ | ಇಂಗ್ಲೀಷ, ಹಿಂದಿ, ಪಂಜಾಬಿ |
| ರಾಜಸ್ಥಾನ | ಇಂಗ್ಲೀಷ, ಹಿಂದಿ |
| ಸಿಕ್ಕಿಂ | ಇಂಗ್ಲೀಷ, ಹಿಂದಿ, ನೇಪಾಳಿ |
| ತೆಲಂಗಾಣ | ಇಂಗ್ಲೀಷ, ಹಿಂದಿ, ತೆಲುಗು, ಕನ್ನಡ, ಮರಾಠಿ, ಉರ್ದು |
| ತ್ರಿಪುರಾ | ಇಂಗ್ಲೀಷ, ಹಿಂದಿ, ಬೆಂಗಾಲಿ |
| ಕೇಂದ್ರಾಡಳಿತ ಪ್ರದೇಶ ಲದಾಕ್ | ಇಂಗ್ಲೀಷ, ಹಿಂದಿ, ಉರ್ದು |
| ಕೇಂದ್ರಾಡಳಿತ ಪ್ರದೇಶ ದಾದರ್ ಮತ್ತು ನಗರ್ ಹವೇಲಿ, ದಮನ್ ಮತ್ತು ದಿಯು | ಇಂಗ್ಲೀಷ, ಹಿಂದಿ, ಗುಜರಾತಿ, ಮರಾಠಿ |
| ಉತ್ತರ ಪ್ರದೇಶ | ಇಂಗ್ಲೀಷ, ಹಿಂದಿ, ಉರ್ದು |
| ಉತ್ತರಾಖಂಡ | ಇಂಗ್ಲೀಷ, ಹಿಂದಿ, ಉರ್ದು |
| ವೆಸ್ಟ್ ಬೆಂಗಾಲ | ಇಂಗ್ಲೀಷ, ಹಿಂದಿ, ಬೆಂಗಾಲಿ, ನೇಪಾಲಿ, ಉರ್ದು |

**ಸೂಚನೆ: ಅಭ್ಯರ್ಥಿಗಳು ಅರ್ಜಿಯಲ್ಲಿ ಹಾಗೂ ಪ್ರವೇಶ ಪತ್ರದಲ್ಲಿ ಯಾವ ಭಾಷಾಮಾಧ್ಯಮವನ್ನು ಸೂಚಿಸಿರುವರೋ ಅದೇ ಮಾಧ್ಯಮದ ಪರೀಕ್ಷಾ ಪುಸ್ತಿಕೆಯನ್ನು ಕೊಡಲಾಗುವುದು.**

## 3. ಪ್ರಶ್ನೆ ಪತ್ರಿಕೆಯ ಸ್ವರೂಪ :

ಆಯ್ಕೆ ಪರೀಕ್ಷೆಗೆ 11.30 ರಿಂದ 01.30 ರವರೆಗೆ ಒಟ್ಟು ಎರಡು ಗಂಟೆಗಳ ಅವಧಿಯ ಪರೀಕ್ಷೆಯಾಗಿರುತ್ತದೆ. ಮತ್ತು ಎಲ್ಲಾ ಪ್ರಶ್ನೆಗಳು ಬಹು ಆಯ್ಕೆ ಪ್ರಶ್ನೆಗಳಾಗಿದ್ದು ಒಟ್ಟು 3 ವಿಭಾಗಗಳಿರುತ್ತವೆ. 80 ಪ್ರಶ್ನೆಗಳಿಗೆ, 100 ಅಂಕಗಳಿರುತ್ತವೆ.

| ಪರೀಕ್ಷೆಯ ನಮೂನೆ | ಒಟ್ಟು ಪ್ರಶ್ನೆಗಳು | ಅಂಕಗಳು | ಸಮಯ |
|---|---|---|---|
| ಮಾನಸಿಕ ಸಾಮರ್ಥ್ಯ ಪರೀಕ್ಷೆ | 40 | 50 | 60 ನಿಮಿಷಗಳು |
| ಅಂಕಗಣಿತ ಪರೀಕ್ಷೆ | 20 | 25 | 30 ನಿಮಿಷಗಳು |
| ಭಾಷಾ ಪರೀಕ್ಷೆ | 20 | 25 | 30 ನಿಮಿಷಗಳು |
| ಒಟ್ಟು | 80 | 100 | 2 ಗಂಟೆಗಳು |

ಪ್ರತಿ ಅಭ್ಯರ್ಥಿಗೂ ಮೂರು ವಿಭಾಗಗಳನ್ನೊಳಗೊಂಡ ಒಂದು ಪರೀಕ್ಷಾ ಪುಸ್ತಿಕೆಯನ್ನು ಕೊಡಲಾಗುವುದು. ಅಂಗವಿಕಲ ವಿದ್ಯಾರ್ಥಿಗಳಿಗೆ 40 ನಿಮಿಷ ಹೆಚ್ಚುವರಿ ಅವಧಿಯನ್ನು ಕೊಡಲಾಗುವುದು.

## 3. ಉತ್ತರಗಳನ್ನು ಗುರುತಿಸುವ ವಿಧಾನ:

ಎ) ಅಭ್ಯರ್ಥಿಗೆ ಪ್ರತ್ಯೇಕ ಉತ್ತರ ಪತ್ರಿಕೆಯನ್ನು ಕೊಡಲಾಗುವುದು. ಅಭ್ಯರ್ಥಿಗಳು ಉತ್ತರ ಸಂಖ್ಯೆಯನ್ನು ಆಪ್ಟಿಕಲ್ ಮಾರ್ಕ ರೆಕಗ್ನಿಷನ್(OMR) ಶೀಟ್‌ನ ನಿಗದಿತ ಸ್ಥಾನದಲ್ಲಿಯೇ ಗುರುತಿಸಬೇಕು. ಮಾದರಿ OMR ಪ್ರತಿಯನ್ನು NVS ಜಾಲತಾಣದಲ್ಲಿ ಅಪ್ಲೋಡ್ ಮಾಡಲಾಗಿದೆ.

ಬಿ) **<u>ಒಎಂಆರ್ ಶೀಟ್‌ನಲ್ಲಿ ಅಭ್ಯರ್ಥಿಗಳು ಉತ್ತರ ಬರೆಯಲು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನನ್ನು ಮಾತ್ರ ಬಳಸಬೇಕು. ಅಭ್ಯರ್ಥಿಗಳು ಈ ಬಾಲ್ ಪಾಯಿಂಟ್ ಪೆನ್ನುಗಳನ್ನು ತಾವೇ ತರಬೇಕು. ಪೆನ್ಸಿಲ್‌ನಿಂದ ಉತ್ತರ ಬರೆಯುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.</u>**

ಸಿ) ಪ್ರತಿ ಪ್ರಶ್ನೆಗೂ ನಾಲ್ಕು ಸಂಭವನೀಯ ಉತ್ತರಗಳು ಇರುತ್ತವೆ(A, B, C, D). ಅವುಗಳಲ್ಲಿ ಒಂದು ಮಾತ್ರ ಸರಿಯಾದ ಉತ್ತರವಿರುತ್ತದೆ. **<u>ಅಭ್ಯರ್ಥಿಗಳು ಸರಿಯಾದ ಉತ್ತರವನ್ನು ಆಯ್ಕೆಮಾಡಿ OMR ಉತ್ತರ ಪತ್ರಿಕೆಯಲ್ಲಿನ ವೃತ್ತವನ್ನು ಪೆನ್ನಿನಿಂದ ತುಂಬಬೇಕು</u>.**

ಉದಾ: ಒಂದುವೇಳೆ ನಿಮ್ಮ 37ನೇ ಪ್ರಶ್ನೆಗೆ Cಸರಿಯಾದ ಉತ್ತರವಾಗಿದ್ದರೆ ಅದನ್ನು ಹೀಗೆ ಬರೆಯಬೇಕು–




ಡಿ) ಒಮ್ಮೆ ಬರೆದ ಉತ್ತರವನ್ನೇ ಸರಿ ಎಂದು ಪರಿಗಣಿಸಲಾಗುವುದು ಆ ಉತ್ತರ ಸಂಖ್ಯೆಯನ್ನು ಉತ್ತರಪತ್ರಿಕೆಯಲ್ಲಿ ತಿದ್ದಿ ಬರೆಯುವುದಕ್ಕೆ ಅಥವಾ ಅಳಿಸಿ ಬರೆಯುವುದಕ್ಕೆ ಅವಕಾಶವಿಲ್ಲ.

ಇ) ಪ್ರತಿಯೊಂದು ಸರಿಯಾದ ಉತ್ತರಕ್ಕೆ 1.25 ಅಂಕ ಕೊಡಲಾಗುವುದು.

ಎಫ್) ತಪ್ಪು ಉತ್ತರವಿದ್ದಲ್ಲಿ ಅಂಕಗಳನ್ನು ಕಳೆಯುವುದಿಲ್ಲ.

## 4 ಸೂಚನೆಗಳು ಮತ್ತು ಉದಾಹರಣೆಗಳ ಕುರಿತು :

ಎ) ಅಭ್ಯರ್ಥಿಗಳು ಪ್ರಶ್ನೆಗಳನ್ನು ಉತ್ತರಿಸುವ ಮೊದಲು ಪ್ರಶ್ನೆಪತ್ರಿಕೆಯ ರಕ್ಷಾಪುಟದಲ್ಲಿ ಹಾಗೂ ಪ್ರತಿ ವಿಭಾಗದ ಪ್ರಶ್ನೆಪತ್ರಿಕೆಯ ಆರಂಭದಲ್ಲಿ ಕೊಟ್ಟಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಳ್ಳಬೇಕು. ವಿದ್ಯಾರ್ಥಿಗಳು ತಾವು ಆಯ್ಕೆಮಾಡಿಕೊಂಡ ಭಾಷೆಯಲ್ಲಿಯೇ ಪ್ರಶ್ನೆ ಪತ್ರಿಕೆ ಸಿಕ್ಕಿದೆಯೇ ಎಂಬುದನ್ನು ಮೊದಲು ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ಅರ್ಜಿ ಪತ್ರದಲ್ಲಿ ತಾವು ನಮೂದಿಸಿದ ಭಾಷಾ ಮಾಧ್ಯಮದ ಪ್ರಶ್ನೆಪತ್ರಿಕೆ ಸಿಗದೇ ಇದ್ದ ಪಕ್ಷದಲ್ಲಿ ಅಭ್ಯರ್ಥಿಗಳು ಪರೀಕ್ಷೆ ಪ್ರಾರಂಭವಾಗುವುದಕ್ಕಿಂತ ಮೊದಲೆ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳಬೇಕು. ಅರ್ಜಿ ನಮೂನೆಯಲ್ಲಿ ಆಯ್ಕೆ ಮಾಡಿದಂತೆ ತನ್ನ ಆಯ್ಕೆಯ ಪರೀಕ್ಷಾ ಕಿರು ಪುಸ್ತಕವನ್ನು ಪಡೆಯುವುದು ಅಭ್ಯರ್ಥಿಯ ಜವಾಬ್ದಾರಿಯಾಗಿದೆ. ಪರೀಕ್ಷೆ ಮುಗಿದ ನಂತರ ಈ ವಿಷಯದಲ್ಲಿ ಯಾವುದೇ ರೀತಿಯ ಪರಿಗಣನೆ ಮಾಡುವುದಿಲ್ಲ.

ಬಿ) ಪ್ರಶ್ನೆ ಪತ್ರಿಕೆಯನ್ನು ಉತ್ತರಿಸಲು ಯಾವ ವಿರಾಮವೂ ಇಲ್ಲದೆ ಒಟ್ಟು ಎರಡು ಗಂಟೆ ಸಮಯಾವಕಾಶವಿರುತ್ತದೆ. ದಿವ್ಯಾಂಗ ವಿದ್ಯಾರ್ಥಿಗಳಿಗೆ ೪೦ ನಿಮಿಷ ಹೆಚ್ಚುವರಿ ಅವಧಿಯನ್ನು ಕೊಡಲಾಗುವುದು.

ಸಿ) ಮೂರು ವಿಭಾಗಗಳಿಂದ ಅರ್ಹತಾ ಅಂಕ ಪಡೆಯುವುದು ಅವಶ್ಯಕ. ಆದುದರಿಂದ ಅಭ್ಯರ್ಥಿಗಳು ಯಾವುದೇ ಒಂದು ಪ್ರಶ್ನೆಗಾಗಿ ಹೆಚ್ಚು ಸಮಯವನ್ನು ತೆಗೆದುಕೊಳ್ಳಬಾರದು. ಯಾವುದೇ ಪ್ರಶ್ನೆಯನ್ನು ಉತ್ತರಿಸಲು ಕಷ್ಟವಾದಲ್ಲಿ ಅದನ್ನು ಅಲ್ಲಿಗೆ ಬಿಟ್ಟು ಮುಂದಿನ ಪ್ರಶ್ನೆಯನ್ನು ಉತ್ತರಿಸಲು ತೊಡಗಬೇಕು. ಇದರಿಂದ ಸಮಯದ ಉಳಿತಾಯವಾಗುತ್ತದೆ. ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿದ ನಂತರ ಸಮಯಾವಕಾಶ ದೊರೆತಲ್ಲಿ ಬಿಟ್ಟಿರುವ ಕಠಿಣ ಪ್ರಶ್ನೆಗಳನ್ನು ಉತ್ತರಿಸಲು ಮತ್ತೆ ಪ್ರಯತ್ನ ಮಾಡಬಹುದು.

ಡಿ) ) ಪ್ರತಿ ಮೂವತ್ತು ನಿಮಿಷಗಳಿಗೊಮ್ಮೆ ಗಂಟೆಬಾರಿಸಿ ಸಮಯವನ್ನು ಸೂಚಿಸಲಾಗುವುದು.

ಗ) ನಿಗದಿತ ಪ್ರವೇಶಪತ್ರವಿಲ್ಲದ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಕೂಡಲು ಅನುಮತಿ ನೀಡಲಾಗುವುದಿಲ್ಲ.

ಏ) ಅಭ್ಯರ್ಥಿಗಳು 11.00 ಗಂಟೆಗೆ ಪರೀಕ್ಷಾ ಕೊಠಡಿಯೊಳಗೆ ತಮ್ಮ ಸ್ಥಳದಲ್ಲಿ ಕುಳಿತಿರಬೇಕು. ತಡವಾಗಿ ಬಂದ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಮತಿ ಕೊಡುವುದಿಲ್ಲ.

ಐ) ಪರೀಕ್ಷಾ ಸಮಯ ಮುಗಿಯುವವರೆಗೆ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರಗೆ ಹೋಗುವಂತಿಲ್ಲ.

# ಪ್ರಶ್ನೆ ಪತ್ರಿಕೆಯ ನಮೂನೆ

**ವಿಭಾಗ –1 : ಮಾನಸಿಕ ಸಾಮರ್ಥ್ಯದ ಪರೀಕ್ಷೆ (ಮಾಸಾಪ)**

ಈ ಪರೀಕ್ಷೆಯು ಶಬ್ದರಹಿತ ಪರೀಕ್ಷೆಯಾಗಿರುತ್ತದೆ. ( Non-Verbal test) ಇದರಲ್ಲಿ ಪ್ರಶ್ನೆಗಳು ಕೇವಲ ಆಕೃತಿ ಮತ್ತು ಚಿತ್ರಗಳನ್ನೆ ಆಧರಿಸಿವೆ. ಅಭ್ಯರ್ಥಿಗಳಲ್ಲಿ ಅಡಗಿರುವ ಮಾನಸಿಕ ಸಾಮರ್ಥ್ಯಗಳನ್ನು ಅಳೆಯುವುದೇ ಈ ಪ್ರಶ್ನೆಗಳ ಮುಖ್ಯ ಗುರಿ. ಈ ವಿಭಾಗವನ್ನು ಹತ್ತು ಉಪವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿ ಉಪವಿಭಾಗದಲ್ಲೂ 5 ಪ್ರಶ್ನೆಗಳಿರುತ್ತವೆ. ಅಂತಹ ಕೆಲವು ಮಾದರಿಗಳನ್ನು ಈ ಕೆಳಗೆ ಕೊಡಲಾಗಿದೆ.

## ಭಾಗ–1 (ಗುಂಪಿಗೆ ಸೇರದುದನ್ನು ಗುರುತಿಸುವುದು)

**ಸೂಚನೆಗಳು :**

1 ರಿಂದ 4 ರವರೆಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದು ಪ್ರಶ್ನೆಯಲ್ಲೂ A, B, C ಮತ್ತುD ಎಂಬ ಆಯ್ಕೆ ಕೊಡಲಾಗಿದೆ. ಈ ನಾಲ್ಕು ಚಿತ್ರಗಳಲ್ಲಿ 3 ಚಿತ್ರಗಳು ಯಾವುದೋ ಒಂದು ರೀತಿಯಲ್ಲಿ ಸಮವಾಗಿವೆ. ಒಂದು ಚಿತ್ರ ಮಾತ್ರ ಬೇರೆಯಾಗಿದೆ. ಆ ಚಿತ್ರದ ಆಯ್ಕೆಯನ್ನು ಉತ್ತರಪತ್ರಿಕೆಯಲ್ಲಿನ ವೃತ್ತವನ್ನು ತುಂಬಿರಿ.

**ಉದಾಹರಣೆ–1**




**ಉತ್ತರ ಚಿತ್ರ (A)**

## ಭಾಗ–2(ಚಿತ್ರವನ್ನು ಹೊಂದಿಸುವುದು)

**ಸೂಚನೆಗಳು :**

5 ರಿಂದ 8 ವರೆಗಿನ ಪ್ರಶ್ನೆಗಳಲ್ಲಿ ಎಡಭಾಗದಲ್ಲಿ ಸಮಸ್ಯಾಚಿತ್ರವೊಂದನ್ನು ಕೊಡಲಾಗಿದೆ. ಬಲಭಾಗದಲ್ಲಿ ಇದಕ್ಕೆ ಉತ್ತರವಾಗಿ A, B, C ಮತ್ತುDಎಂದು ಗುರುತಿಸಿರುವ 4 ಚಿತ್ರಗಳಲ್ಲಿ ಒಂದು ಮಾತ್ರ ಎಡಭಾಗದಲ್ಲಿ ಕೊಟ್ಟಿರುವ ಸಮಸ್ಯಾಚಿತ್ರವನ್ನು ಸಂಪೂರ್ಣವಾಗಿ ಹೋಲುತ್ತದೆ. ಸರಿಯಾದ ಉತ್ತರವನ್ನು ಉತ್ತರಪತ್ರಿಕೆಯಲ್ಲಿ ತುಂಬಿರಿ.

**ಉದಾಹರಣೆ –2**

**ಸಮಸ್ಯಾ ಚಿತ್ರ** **ಉತ್ತರ ಚಿತ್ರಗಳು**




**ಉತ್ತರಚಿತ್ರ – (C)**

## ಭಾಗ–3(ಮಾದರಿಯನ್ನು ಪೂರ್ಣಗೊಳಿಸುವುದು)

**ಸೂಚನೆಗಳು:**

9 ರಿಂದ 12 ರವರೆಗಿನ ಪ್ರಶ್ನೆಗಳಲ್ಲಿ ಒಂದು ಸಮಸ್ಯಾ ಚಿತ್ರವನ್ನು, ಇಲ್ಲಿ ಎಡಭಾಗದಲ್ಲಿ ಕೊಡಲಾಗಿದೆ. ಈ ಚಿತ್ರದ ಒಂದು ಭಾಗವು ಬಿಟ್ಟುಹೋಗಿದೆ. ಬಲಭಾಗದಲ್ಲಿರುವ A, B, C, D ಉತ್ತರ ಚಿತ್ರಗಳನ್ನು ಗಮನಿಸಿರಿ. ಸಮಸ್ಯಾ ಚಿತ್ರದ ದಿಕ್ಕನ್ನು ಬದಲಾಯಿಸದೆ, ಸಮಸ್ಯಾ ಚಿತ್ರದ ಮಾದರಿಯನ್ನು ಪೂರ್ಣಗೊಳಿಸುವ ಉತ್ತರ ಚಿತ್ರವನ್ನು ಗುರುತಿಸಿ, ಆ ಉತ್ತರ ಆಯ್ಕೆಯನ್ನು ಉತ್ತರ ಪತ್ರಿಕೆಯಲ್ಲಿ ತುಂಬಿರಿ.

**ಉದಾಹರಣೆ :3**

**ಸಮಸ್ಯಾ ಚಿತ್ರ** **ಉತ್ತರ ಚಿತ್ರಗಳು**






**ಸರಿಯಾದ ಉತ್ತರ– (A)**

## ಭಾಗ–4 (ಚಿತ್ರದ ಅನುಕ್ರಮಣಿಕೆಯನ್ನು ಪೂರ್ಣಗೊಳಿಸುವುದು)

**ಸೂಚನೆಗಳು:**

13 ರಿಂದ 16 ರವರೆಗಿನ ಪ್ರಶ್ನೆಗಳಲ್ಲಿ ಎಡಭಾಗದಲ್ಲಿ ಮೂರು ಸಮಸ್ಯಾ ಚಿತ್ರಗಳಿವೆ ಮತ್ತು ನಾಲ್ಕನೆಯ ಚಿತ್ರದ ಸ್ಥಳ ಖಾಲಿ ಇದೆ. ಈ ಸಮಸ್ಯಾ ಚಿತ್ರಗಳು ಒಂದು ವಿಧವಾದ ಅನುಕ್ರಮ ಶ್ರೇಣಿಯಲ್ಲಿವೆ. ಉತ್ತರ ಚಿತ್ರಗಳಲ್ಲಿ ಯಾವುದು ಈ ಸಮಸ್ಯಾ ಚಿತ್ರದ ನಿರಂತರ ಶ್ರೇಣಿಯನ್ನು ಪೂರ್ಣಗೊಳಿಸುತ್ತದೆ ಎಂಬುದನ್ನು ಗುರುತಿಸಿ ಆ ಉತ್ತರ ಆಯ್ಕೆಯನ್ನು ಉತ್ತರ ಪತ್ರಿಕೆಯಲ್ಲಿ ತುಂಬಿರಿ.

**ಉದಾಹರಣೆ :4** **ಸಮಸ್ಯಾ ಚಿತ್ರ** **ಉತ್ತರ ಚಿತ್ರಗಳು**

**18**






**ಸರಿಯದ ಉತ್ತರ– (C)**

# ಭಾಗ–5(ಹೋಲಿಕೆ)

**ಸೂಚನೆಗಳು:**

17 ರಿಂದ 20 ರವರೆಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದರಲ್ಲಿ ಎರಡು ಸಮಸ್ಯಾ ಚಿತ್ರಗಳ ಎರಡು ಗಣಗಳಿವೆ. ನಂತರ ಎರಡನೆಯ ಗಣದ ಎರಡನೆಯ ಚಿತ್ರದ ಸ್ಥಾನದಲ್ಲಿ ಒಂದು ಪ್ರಶ್ನೆಚಿಹ್ನೆ(?)ಯನ್ನು ಕೊಡಲಾಗಿದೆ. ಮೊದಲು ಎರಡು ಸಮಸ್ಯಾ ಚಿತ್ರಗಳ ನಡುವೆ ಒಂದು ರೀತಿಯ ಸಂಬಂಧ ಇದೆ. ಈ ರೀತಿಯ ಸಂಬಂಧವು 3 ಮತ್ತು 4 ನೆಯ ಸಮಸ್ಯಾ ಚಿತ್ರಗಳ ನಡುವೆಯೂ ಇರಬೇಕು. ಪ್ರಶ್ನೆಚಿಹ್ನೆಯ ಸ್ಥಾನದಲ್ಲಿ ಇರಬೇಕಾದ ಸೂಕ್ತವಾದ ಉತ್ತರ ಚಿತ್ರವನ್ನು, ಕೊಟ್ಟಿರುವ ಉತ್ತರ ಚಿತ್ರಗಳಿಂದ ಆರಿಸಿ ಉತ್ತರ ಆಯ್ಕೆಯನ್ನು ಉತ್ತರ ಪತ್ರಿಕೆಯಲ್ಲಿ ತುಂಬಿರಿ.

**ಉದಾಹರಣೆ : 5** **ಸಮಸ್ಯಾ ಚಿತ್ರ** **ಉತ್ತರ ಚಿತ್ರಗಳು**







**ಇಲ್ಲಿ ಉತ್ತರ ಚಿತ್ರ (A)**

## ಭಾಗ– 6{ರೇಖಾಗಣಿತಾತ್ಮಕ ಚಿತ್ರ ಪೂರ್ಣಗೊಳಿಸುವುದು (ತ್ರಿಭುಜ, ಚತುರ್ಭುಜ, ವೃತ್ತ)}

**ಸೂಚನೆಗಳು:**

21 ರಿಂದ24ರವರೆಗಿನ ಪ್ರಶ್ನೆಗಳಲ್ಲಿ ಎಡಪಕ್ಕದಲ್ಲಿ ರೇಖಾಕೃತಿಯ ಒಂದು ಭಾಗವಿದೆ ಮತ್ತು ಅದರ ಇನ್ನೊಂದು ಭಾಗ ಬಲಬದಿಯಲ್ಲಿರುವ A, B, C ಮತ್ತುDಉತ್ತರಚಿತ್ರಗಳಲ್ಲಿ ಒಂದಾಗಿದೆ. ಬಲಭಾಗದ ಉತ್ತರಚಿತ್ರಗಳಿಂದ ರೇಖಾಕೃತಿಯನ್ನು ಪೂರ್ಣಗೊಳಿಸುವ ಭಾಗವನ್ನು ಕಂಡು ಹಿಡಿದು ಆ ಉತ್ತರ ಆಯ್ಕೆಯನ್ನು ಉತ್ತರಪತ್ರಿಕೆಯಲ್ಲಿ ತುಂಬಿರಿ.

**ಉದಾಹರಣೆ –6**






**ಸರಿಯಾದ ಉತ್ತರ – (A)**

## ಭಾಗ –7 (ಕನ್ನಡಿ ಪ್ರತಿಬಿಂಬ)

**ಸೂಚನೆಗಳು:**

25 ರಿಂದ 28 ರವರೆಗಿನ ಪ್ರಶ್ನೆಗಳಲ್ಲಿ ಎಡಭಾಗದಲ್ಲಿ ಒಂದು ಸಮಸ್ಯಾ ಚಿತ್ರವಿದೆ. ಈ ಚಿತ್ರದ ಒಂದು ಭಾಗವು ಬಿಟ್ಟುಹೋಗಿದೆ. A, B, C ಮತ್ತುD ಎಂದು ಗುರುತಿಸಿರುವ ನಾಲ್ಕು ಉತ್ತರ ಚಿತ್ರಗಳನ್ನು ಬಲಭಾಗದಲ್ಲಿ ಕೊಡಲಾಗಿದೆ. X Y ಎಂದು ಕನ್ನಡಿಯನ್ನು ಹಿಡಿದಾಗ ಕನ್ನಡಿ ಪ್ರತಿಬಿಂಬದ ಸಮಸ್ಯಾ ಚಿತ್ರದ ಉತ್ತರ ಚಿತ್ರವನ್ನು ಆರಿಸಿ ಆ ಉತ್ತರ ಆಯ್ಕೆಯನ್ನು ಉತ್ತರ ಪತ್ರಿಕೆಯಲ್ಲಿ ತುಂಬಿರಿ.

**ಉದಾಹರಣೆ–7**

**ಸಮಸ್ಯಾ ಚಿತ್ರ** **ಉತ್ತರ ಚಿತ್ರಗಳು**




**ಸರಿಯಾದ ಉತ್ತರ – (D)**

## ಭಾಗ –8 (ಗುರುತುಮಾಡಿ ಹಿಡಿಯುವ ಮಾದರಿ– ಮಡಚುವುದು/ ಮಡಚಿದ್ದನ್ನು ಬಿಚ್ಚುವುದು)

**ಸೂಚನೆಗಳು:**

29 ರಿಂದ 32 ರವರೆಗಿನ ಪ್ರಶ್ನೆಗಳಲ್ಲಿ ಎಡಭಾಗದ ಸಮಸ್ಯಾ ಚಿತ್ರದಲ್ಲಿ ತೋರಿಸಿರುವಂತೆ ಒಂದು ಕಾಗದವನ್ನು ಮಡಚಲಾಗಿದೆ ಮತ್ತು ಗುರುತು ಮಾಡಲಾಗಿದೆ. A, B, C ಮತ್ತುDಎಂದು ಗುರುತಿಸಿರುವ ನಾಲ್ಕು ಉತ್ತರ ಚಿತ್ರಗಳನ್ನು ಬಲಭಾಗದಲ್ಲಿ ಕೊಡಲಾಗಿದೆ. ಕಾಗದವನ್ನು ಬಿಚ್ಚಿದಾಗ ಹೇಗೆ ಕಂಡುಬರುತ್ತದೆಂಬುದನ್ನು ತೋರಿಸುವ ಉತ್ತರಚಿತ್ರವನ್ನು ಗುರುತಿಸಿ ಉತ್ತರ ಆಯ್ಕೆಯನ್ನು ಉತ್ತರ ಪತ್ರಿಕೆಯಲ್ಲಿ ತುಂಬಿರಿ.

**ಉದಾಹರಣೆ–8**

**ಸಮಸ್ಯಾ ಚಿತ್ರ** **ಉತ್ತರ ಚಿತ್ರಗಳು**




**ಸರಿಯಾದ ಉತ್ತರ – (A)**

## ಭಾಗ –9 (ಸ್ಥಳ ದೃಶ್ಯೀಕರಣ)

**ಸೂಚನೆಗಳು:**

33 ರಿಂದ 36 ರವರೆಗಿನ ಪ್ರಶ್ನೆಗಳಲ್ಲಿ ಎಡಭಾಗದಲ್ಲಿ ಸಮಸ್ಯಾ ಚಿತ್ರವನ್ನು ಕೊಡಲಾಗಿದೆ ಮತ್ತು A, B, C ಮತ್ತುD ಎಂದು ಗುರುತಿಸಿರುವ ನಾಲ್ಕು ಉತ್ತರ ಚಿತ್ರಗಳನ್ನು ಬಲಭಾಗದಲ್ಲಿ ಕೊಡಲಾಗಿದೆ. ಸಮಸ್ಯಾ ಚಿತ್ರದಲ್ಲಿ ಕೊಟ್ಟಿರುವ ಕತ್ತರಿಸಿರುವ ಚೂರುಗಳಿಂದ ತಯಾರಾದ ಉತ್ತರಚಿತ್ರವನ್ನು ಗುರುತಿಸಿ ಆ ಉತ್ತರ ಆಯ್ಕೆಯನ್ನು ಉತ್ತರ ಪತ್ರಿಕೆಯಲ್ಲಿ ತುಂಬಿರಿ.

**ಉದಾಹರಣೆ–9**

**ಸಮಸ್ಯಾ ಚಿತ್ರ** **ಉತ್ತರ ಚಿತ್ರಗಳು**




**ಸರಿಯಾದ ಉತ್ತರ – (D)**

## ಭಾಗ –10 (ಹುದುಗಿರುವ ಚಿತ್ರ)

**ಸೂಚನೆಗಳು:**

37 ರಿಂದ 40 ರವರೆಗಿನ ಪ್ರಶ್ನೆಗಳಲ್ಲಿ ಎಡಭಾಗದಲ್ಲಿ ಸಮಸ್ಯಾ ಚಿತ್ರವನ್ನು ಕೊಡಲಾಗಿದೆ ಮತ್ತು A, B, C ಮತ್ತುD ಎಂದು ಗುರುತಿಸಿರುವ ನಾಲ್ಕು ಉತ್ತರ ಚಿತ್ರಗಳನ್ನು ಬಲಭಾಗದಲ್ಲಿ ಕೊಡಲಾಗಿದೆ. ಉತ್ತರಚಿತ್ರಗಳಲ್ಲಿ ಹುದುಗಿರುವ ಸಮಸ್ಯಾ ಚಿತ್ರವನ್ನು ಗುರುತಿಸಿ ಆ ಉತ್ತರ ಆಯ್ಕೆಯನ್ನು ಉತ್ತರ ಪತ್ರಿಕೆಯಲ್ಲಿ ತುಂಬಿರಿ.

**ಉದಾಹರಣೆ–10**

**ಸಮಸ್ಯಾ ಚಿತ್ರ** **ಉತ್ತರ ಚಿತ್ರಗಳು**






**ಸರಿಯಾದ ಉತ್ತರ – (B)**

## ವಿಭಾಗ – 2 ಅಂಕಗಣಿತ ಪರೀಕ್ಷೆ

ಮಕ್ಕಳಲ್ಲಿ ಅಂಕಗಣಿತದ ಜ್ಞಾನ ಮತ್ತು ಕೌಶಲ್ಯಗಳನ್ನು ಅಳೆಯುವುದೇ ಈ ಪರೀಕ್ಷೆಯ ಮುಖ್ಯ ಉದ್ದೇಶ. ಈ ಪರೀಕ್ಷೆಯ ಎಲ್ಲ 20 ಪ್ರಶ್ನೆಗಳು ಕೆಳಗೆ ಕೊಟ್ಟಿರುವ 15 ಪಠ್ಯವಸ್ತುಗಳನ್ನೇ ಆಧರಿಸಿರುತ್ತವೆ.

1) ಸಂಖ್ಯೆಗಳು ಮತ್ತು ಸಂಖ್ಯಾ ಪದ್ಧತಿ.
2) ಪೂರ್ಣಾಂಕಗಳ ಮೇಲಿನ ನಾಲ್ಕು ಗಣಿತದ ಮೂಲಭೂತ ಕ್ರಿಯೆಗಳು.
3) ಭಿನ್ನಾಂಕ ಮತ್ತು ಅವುಗಳ ಮೇಲಿನ ನಾಲ್ಕು ಗಣಿತದ ಮೂಲಭೂತ ಕ್ರಿಯೆಗಳು.
4) ಅಪವರ್ತನಗಳು ಮತ್ತು ಗುಣಕಗಳು – ಅವುಗಳ ಗುಣವಿಶೇಷಗಳು ಸೇರಿದಂತೆ.
5) ಲಘುತಮ ಸಾಮಾನ್ಯ ಅಪವರ್ತನ (ಲ.ಸಾ.ಅ) ಮತ್ತು
   ಮಹತ್ತರ ಸಾಮಾನ್ಯ ಅಪವರ್ತನ (ಮ.ಸಾ.ಅ).
6) ದಶಮಾಂಶಗಳು ಮತ್ತು ಅವುಗಳ ಮೇಲಿನ ಗಣಿತದ ಮೂಲಭೂತ ಕ್ರಿಯೆಗಳು.
7) ಭಿನ್ನರಾಶಿಯನ್ನು ದಶಮಾಂಶವಾಗಿಯೂ ದಶಮಾಂಶವನ್ನು ಭಿನ್ನರಾಶಿಯಾಗಿಯೂ ಪರಿವರ್ತಿಸುವುದು.
8) ಅಳತೆಗಳಲ್ಲಿ ಸಂಖ್ಯೆಗಳ ಪ್ರಯೋಗ – ಉದ್ದ, ದ್ರವ್ಯರಾಶಿ, ಸಾಮರ್ಥ್ಯ, ಕಾಲ, ಹಣ ಇತ್ಯಾದಿ.
9) ದೂರ, ಕಾಲ ಮತ್ತು ವೇಗ
10) ಅಂದಾಜು ಬೆಲೆ ಕಂಡುಹಿಡಿಯುವುದು
11) ಸರಳೀಕರಣ
12) ಶೇಕಡಾಕ್ರಮ ಮತ್ತು ಅದರ ಅನ್ವಯಗಳು
13) ಲಾಭ ಮತ್ತು ನಷ್ಟ
14) ಸರಳಬಡ್ಡಿ
15) ಸುತ್ತಳತೆ, ವಿಸ್ತೀರ್ಣ ಮತ್ತು ಗಾತ್ರ

ಸೂಚನೆ: ಗಣಿತದ ಪರಿಕಲ್ಪನೆಗಳ ಅರಿವು, ಅನ್ವಯ ಹಾಗೂ ಕೌಶಲ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು. ಗಣಿತದ ಪರೀಕ್ಷೆಯಲ್ಲಿ ನಿರೀಕ್ಷಿಸಬಹುದಾದ ಪ್ರಶ್ನೆಗಳ ಬಗ್ಗೆ ಅಭ್ಯರ್ಥಿಗಳಿಗೆ ಸಲಹೆ ನೀಡುವ ಉದ್ದೇಶದಿಂದ ಕೆಲವು ಮಾದರಿ ಪ್ರಶ್ನೆಗಳನ್ನು ಉದಾಹರಣೆಯ ರೂಪದಲ್ಲಿ ಈ ಕೆಳಗೆ ಕೊಡಲಾಗಿದೆ.

ಉದಾಹರಣೆ –1 **(ಅರಿವನ್ನು ಪರೀಕ್ಷಿಸುವುದು)**

“1000” ಸಂಖ್ಯೆಯ ಅವಿಭಾಜ್ಯ ಅಪವರ್ತನೀಕರಣಗಳು ಯಾವುವು ?

A) 10x10x10 C) 2x2x2x5x5

B) 2x5x5x10 D) 2x2x2x5x5x5

ಅಪವರ್ತನದ ಎಲ್ಲ ಗುಣಕಗಳ ಉತ್ಪನ್ನವು ದತ್ತಸಂಖ್ಯೆಗೆ ಸಮವಾಗಿರಬೇಕು. ಪ್ರತಿಯೊಂದು ಅಪವರ್ತನ ಸಂಖ್ಯೆಯು ಅವಿಭಾಜ್ಯ ಸಂಖ್ಯೆಯಾಗಿರಬೇಕು. ಈ ರೂಪದಲ್ಲಿದ್ದಾಗ ಮಾತ್ರ ಆ ಅಪವರ್ತನವು ಅವಿಭಾಜ್ಯ ಅಪವರ್ತನವಾಗಿರುತ್ತದೆ. ಇಲ್ಲಿ ಎರಡೂ ಅಗತ್ಯಗಳನ್ನು 4 ನೇ ಉತ್ತರ ಮಾತ್ರ ಪೂರೈಸುತ್ತದೆ. ಆದ್ದರಿಂದ D ಸರಿಯಾದ ಉತ್ತರ.

**ಉದಾಹರಣೆ –2 ( ಅರಿವನ್ನು ಪರೀಕ್ಷಿಸುವುದು )**

ಮೊದಲ 4 ಬೆಸಸಂಖ್ಯೆಗಳ ಸರಾಸರಿ ಯಾವುದು?

A) 5 B) 4 C) 5 D) 16

1, 3, 5 ಮತ್ತು 7 ಮೊದಲ ನಾಲ್ಕು ಬೆಸಸಂಖ್ಯೆಗಳು ಅವುಗಳ ಸರಾಸರಿಯು –( 1+3+5+7) +4–4ಆದುದರಿಂದ ಉತ್ತರ ಸಂಖ್ಯೆ B ಸರಿಯಾದ ಉತ್ತರ.

**ಉದಾಹರಣೆ –3 ( ಅನ್ವಯ ಸಾಮರ್ಥ್ಯವನ್ನು ಪರೀಕ್ಷಿಸುವುದು)**

1 ಕಿ.ಮೀ. ಉದ್ದದ ಒಂದು ಗೂಡ್ಸ್ ರೈಲು ಗಾಡಿಯು 3 ನಿಮಿಷಗಳಿಗೆ ಒಂದು ಕಿ.ಮೀ. ವೇಗದಲ್ಲಿ ಓಡುತ್ತದೆ. ಈ ಗಾಡಿಯು 2 ಕಿ.ಮೀ. ಉದ್ದದ ಸುರಂಗವನ್ನು ಹಾದು ಹೋಗಲು ತೆಗೆದುಕೊಳ್ಳುವ ಸಮಯ (ಕಾಲ)

A) 1 ನಿಮಿಷ C) 6 ನಿಮಿಷಗಳು

B) 3 ನಿಮಿಷಗಳು D) 9 ನಿಮಿಷಗಳು

ಈ ಪ್ರಶ್ನೆಯಲ್ಲಿ ಸುರಂಗದ ಉದ್ದ ೨ ಕಿ.ಮೀ. ಮತ್ತು ರೈಲಿನ ಉದ್ದ ಒಂದು ಕಿ.ಮೀ. ರೈಲುಗಾಡಿಯು ಒಟ್ಟು ೩ ಕಿ. ಮೀ. ದೂರವನ್ನು ದಾಟಬೇಕಾಗಿದೆ. ಸುರಂಗದ ಮೂಲಕ ರೈಲು ಗಾಡಿಯು ಮೂರು ನಿಮಿಷಗಳಿಗೆ ಒಂದು ಕಿ.ಮೀ. ವೇಗದಲ್ಲಿ ಹಾದು ಹೋಗಲು ೯ ನಿಮಿಷಗಳನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ D ಸರಿಯಾದ ಉತ್ತರ.

## ವಿಭಾಗ – 3. ಭಾಷಾ ಪರೀಕ್ಷೆ

ಈ ಪರೀಕ್ಷೆಯ ಮುಖ್ಯ ಉದ್ದೇಶ – ಅಭ್ಯರ್ಥಿಗಳ ಓದಿನ ಗ್ರಹಿಕೆಯನ್ನು ಮಾಪನ ಮಾಡುವುದು. ಈ ಪರೀಕ್ಷೆಯಲ್ಲಿ ಐದು ವಾಕ್ಯವೃಂದಗಳಿವೆ. ಪ್ರತಿ ವಾಕ್ಯವೃಂದದ ನಂತರ, ವಾಕ್ಯವೃಂದಕ್ಕೆ ಸಂಬಂಧಿಸಿದ 5 ಪ್ರಶ್ನೆಗಳಿವೆ. ಅಭ್ಯರ್ಥಿಗಳು ಪ್ರತಿಯೊಂದು ವಾಕ್ಯವೃಂದವನ್ನು ಗಮನವಿಟ್ಟು ಓದಿ, ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಬೇಕು.

**ಮಾದರಿ ವಾಕ್ಯವೃಂದ ಮತ್ತು ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೆಳಗೆ ಕೊಡಲಾಗಿದೆ.**

## ವಾಕ್ಯಾವಳಿ

ಕಾಡುಗಳು ನಮಗೆ ಅನೇಕ ರೀತಿಯಲ್ಲಿ ಉಪಯುಕ್ತವಾಗಿವೆ. ಮನೆಯನ್ನು ಕಟ್ಟಲು ಮತ್ತು ಪೀಠೋಪಕರಣಗಳನ್ನು ತಯಾರಿಸಲು ಮರಮುಟ್ಟುಗಳನ್ನು ಒದಗಿಸುತ್ತವೆ. ಕಾಡುಗಳು ಇಂಧನಕ್ಕೆ ಮತ್ತು ಕಾಗದದ ತಯಾರಿಕೆಗೆ ಕಟ್ಟಿಗೆಯನ್ನು ಸಹ ಒದಗಿಸುತ್ತವೆ. ಪಕ್ಷಿಗಳಿಗೆ, ಕಾಡುಪ್ರಾಣಿಗಳಿಗೆ ಮತ್ತು ಕ್ರಿಮಿಕೀಟಗಳಿಗೆ ಆಶ್ರಯವನ್ನು ನೀಡುತ್ತವೆ. ಕಾಡುಗಳು ಮಳೆಯನ್ನು ತರುತ್ತವೆ. ಜೀವ ಪರಿಸರ ವ್ಯವಸ್ಥೆಯನ್ನು ಕಾಯ್ದುಕೊಳ್ಳುವುದಕ್ಕೆ ಕಾಡುಗಳ ಅಸ್ತಿತ್ವ ಅತ್ಯಂತ ಮುಖ್ಯವಾಗಿದೆ. ವಾಸ್ತವವೇನೆಂದರೆ ನಾವು ಜೀವ ಪರಿಸರ ವ್ಯವಸ್ಥೆಯನ್ನು ವಿವಾದರಹಿತಾತ್ಮಕವಾಗಿ ಸ್ಥಾಪಿಸಬೇಕಾಗಿದೆ. ಮಾನವನ ನಿರಂತರ ಉಳಿಯುವಿಕೆಗೆ, ಪರಿಸರ ಮತ್ತು ಅದರ ಸಂಪನ್ಮೂಲಗಳನ್ನು ಜಾಣತನದಿಂದ ಬಳಸುವುದು ಅಗತ್ಯವಾಗಿದೆ.

1)ಜೀವ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸಲು ____________ ಅಸ್ತಿತ್ವ ಅಗತ್ಯವಾಗಿದೆ.

A) ಕಾಡುಗಳ B) ಪ್ರಾಣಿಗಳ

C) ಮಾನವಜೀವಿಗಳ D) ಸಂಪನ್ಮೂಲಗಳ

ಸರಿಯಾದ ಉತ್ತರ –A

2)'ಸಂರಕ್ಷಣೆ' ಪದದ ವಿರುದ್ಧಾರ್ಥಕ ಪದ _________________

A)ರಕ್ಷಣೆ B) ಸಂರಚನೆ

C) ಆಶ್ರಯ D) ವಿನಾಶ

ಸರಿಯಾದ ಉತ್ತರ –D

3) ಈ ಕೆಳಗಿನ ಯಾವ ಪದವು 'ಜಾಣ' ಪದದ ಸಮಾನಾರ್ಥಕ ಪದವಲ್ಲ __________________

A) ಸಂವೇದನಾಶೀಲ B) ಬುದ್ಧಿವಂತ

C) ವಿನೋದಶೀಲ D) ವಿವೇಚನಾಶೀಲ

ಸರಿಯಾದ ಉತ್ತರ – B

4) ಬಡಗಿಗಳು ಕಾಡುಗಳನ್ನವಲಂಬಿಸಿದ್ದಾರೆ. ಏಕೆಂದರೆ ಅವು _________________ ಒದಗಿಸುತ್ತವೆ.

A) ಇಂಧನಕ್ಕಾಗಿ ಮರವನ್ನು B) ಕಾಗದ ತಯಾರಿಸಲು ಮರವನ್ನು

C) ಪೀಠೋಪಕರಣಗಳನ್ನು ತಯಾರಿಸಲು ಮರವನ್ನು D) ಪ್ರಾಣಿಗಳಿಗೆ ಮನೆಗಳನ್ನು

ಸರಿಯಾದ ಉತ್ತರ – C

5) ಒಂದುವೇಳೆ ________________ ಕಾಡುಪ್ರಾಣಿಗಳು ಆಶ್ರಯರಹಿತವಾಗುತ್ತವೆ.

A) ಕಾಗದದ ಕಾರ್ಖಾನೆಗಳು ನಾಶವಾದರೆ B) ಮನೆಗಳನ್ನು ಕಟ್ಟಿದರೆ

C) ಕಾಡುಗಳನ್ನು ನಾಶಮಾಡಿದರೆ D) ಜೀವಪರಿಸರ ವ್ಯವಸ್ಥೆಯ ಕಾಳಜಿ ಮಾಡಿದರೆ

ಸರಿಯಾದ ಉತ್ತರ – C

## ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆಯ ಗಣಕೀಕೃತ ಅರ್ಜಿ ತುಂಬಲು ಕೆಲವು ಪ್ರಮುಖ ಮಾಹಿತಿಗಳು

ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ ಅರ್ಜಿಯನ್ನು ತುಂಬಬೇಕಾದ ಅಂಶಗಳನ್ನು ಅದೇ ಅರ್ಜಿ ನೋಡಿದಾಗ ತಿಳಿಯಬಹುದು. ಆದರೂ ಕೆಳಗೆ ನಮೂದಿಸಿದ ಅಂಶಗಳನ್ನು ಅಭ್ಯರ್ಥಿಗಳು ಹಾಗೂ ಪಾಲಕರು ಗಮನದಲ್ಲಿ ಇಟ್ಟು ಅರ್ಜಿ ತುಂಬಬೇಕು.

1) ಪ್ರವೇಶ ಪರೀಕ್ಷೆ ಪುಸ್ತಕದಲ್ಲಿ ಕೊಟ್ಟ ಅಂಶಗಳನ್ನು ಗಮನವಿಟ್ಟು ಓದಿಕೊಳ್ಳಿ. ಅರ್ಜಿಯಲ್ಲಿ ಕೊಟ್ಟ ಎಲ್ಲ ಮಾಹಿತಿಗಳನ್ನು ಸರಿಯಾಗಿ ತುಂಬಿರಿ. ಉದಾಹರಣೆ ಜನ್ಮ ದಿನಾಂಕವು 01.05.2009 ರಿಂದ 30.04.2013 ಒಳಗಾಗಿ ಇರಬೇಕು, 3, 4 ಮತ್ತು 5ನೇ ತರಗತಿ ಓದಿದ ಶಾಲೆಯು ಮಾನ್ಯತೆ ಪಡೆದಿರಬೇಕು.( ಸರ್ಕಾರಿ/ಸರ್ಕಾರದ ಅನುದಾನಿತ/ಸರ್ಕಾರದಿಂದ ಮಾನ್ಯತೆ ಪಡೆದ/NIOS)
2) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗ, ಸಾಮಾನ್ಯ ಹಾಗೂ ಅಂಗವಿಕಲರು , ಗಂಡು/ಹೆಣ್ಣು, ಗ್ರಾಮೀಣ/ನಗರ ಇತ್ಯಾದಿ ವಿಷಯಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಆಯ್ಕೆಯಾದ ಮೇಲೆ ಆ ಅಭ್ಯರ್ಥಿ ಆ ಗುಂಪಿಗೆ ಸೇರದೆ ಹೋಗಿದ್ದರೆ ಅಂತಹವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.
3) (ಅ) ಜನ್ಮ ದಿನಾಂಕವನ್ನು ಅಂಕಿ ಮತ್ತು ಅಕ್ಷರ ಎರಡಲ್ಲೂ ಬರೆಯಿರಿ. ಶಾಲಾ ದಾಖಲಾತಿಯಂತೆ ಜನ್ಮ ದಿನಾಂಕವನ್ನು ಬರೆಯಿರಿ. ಒಂದು ವೇಳೆ ನೀವು ನಮೂದಿಸಿರುವ ಜನ್ಮ ದಿನಾಂಕ ಶಾಲಾದಾಖಲಾತಿಯಂತೆ ಇರದೇ ಹೋದರೆ ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವದು.

(ಬಿ) ಅಭ್ಯರ್ಥಿಯ ಅಳಿಸಲಾಗದ ಗುರುತನ್ನು ಕಂಡು ಹಿಡಿಯಲು ಯಾವುದಾದರೂ ಅಳಿಸಲಾಗದ ಗುರುತನ್ನು ನಮೂದಿಸಬೇಕು.

4) ಗಣಕೀಕೃತವಾಗಿ ಅರ್ಜಿ ತುಂಬುವಾಗ ಅಭ್ಯರ್ಥಿ ಹಾಗೂ ಪೋಷಕರು/ಪಾಲಕರ ಸಹಿಯನ್ನು ಕಡ್ಡಾಯವಾಗಿ ಅಪ್ ಲೋಡ ಮಾಡಬೇಕು.

5) ಗಣಕೀಕೃತ ಅರ್ಜಿ ತುಂಬಲು ಕೊನೆಯ ದಿನಾಂಕ **30 ನೇ ನವೆಂಬರ್ 2021**.

**ಎಚ್ಚರಿಕೆ:** ಅಭ್ಯರ್ಥಿಗಳ ಅರ್ಜಿಯಲ್ಲಿ ಯಾವುದೇ ಕಾಲಮ್‌ಗಳನ್ನು ಖಾಲಿ ಬಿಟ್ಟರೆ ಅರ್ಜಿ ತಿರಸ್ಕೃತವಾಗುವುದು. ಅಭ್ಯರ್ಥಿಗಳು ಅರ್ಜಿ ತುಂಬುವಾಗ ಮೊದಲೇ ಎಲ್ಲಾ ಸೂಚನೆಗಳನ್ನು ಓದಿಕೊಂಡು ತಪ್ಪಾಗದಂತೆ ಎಚ್ಚರವಹಿಸಿ – ಬೇಕಾದ ಶಿಕ್ಷಣ, ವಯಸ್ಸು ಮತ್ತು ವಿಶೇಷ ಜಾತಿ (ಎಸ್‌ಸಿ. ಎಸ್‌ಟಿ, ದಿವ್ಯಾಂಗ) ಮತ್ತು ಕ್ಷೇತ್ರ (ಗ್ರಾಮೀಣ, ಪಟ್ಟಣ) ಮಾಹಿತಿಯನ್ನು ಅಪ್‌ಲೋಡ ಮಾಡಬೇಕು. ಅರ್ಜಿಯಲ್ಲಿ ತುಂಬಿದ ಮಾಹಿತಿಯು ಪರಿಶೀಲನೆಯ ನಂತರ ಸುಳ್ಳು / ದೋಷ ಪೂರಿತ ಎಂದು ಕಂಡು ಬಂದಲ್ಲಿ ಅಭ್ಯರ್ಥಿಯ ಆಯ್ಕೆಯ ನಂತರವೂ ಪ್ರವೇಶವನ್ನು ರದ್ದುಗೊಳಿಸುವ ಅಧಿಕಾರ ನವೋದಯ ವಿದ್ಯಾಲಯ ಸಮಿತಿಗೆ ಇದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರ ಇರುವುದಿಲ್ಲ. ತಪ್ಪು ದಾಖಲೆಗಳೊಂದಿಗೆ ಪ್ರವೇಶ ಪಡೆದು, ತದನಂತರ ಅಭ್ಯರ್ಥಿ ಕೊಟ್ಟ ಮಾಹಿತಿ ಸುಳ್ಳು ಎಂದು ಕಂಡು ಬಂದಲ್ಲಿ ಕೇವಲ ಪ್ರವೇಶವನ್ನು ಕಿತ್ತು ಹಾಕುವುದಲ್ಲದೇ ಸಂಬಂಧಿಸಿದ ದಿನಗಳ ಖರ್ಚುವೆಚ್ಚವನ್ನು ಅಭ್ಯರ್ಥಿಗಳಿಂದ ವಸೂಲಿ ಮಾಡುವ ಅಧಿಕಾರ ನವೋದಯ ವಿದ್ಯಾಲಯ ಸಮಿತಿಗೆ ಸೇರಿರುತ್ತದೆ.

# <u>ವಾಸಸ್ಥಾನ ಪ್ರಮಾಣ ಪತ್ರ</u>

**(ಜ.ನ.ವಿ ಯಲ್ಲಿ ಪ್ರವೇಶ ಬಯಸುವ NIOS ಅಭ್ಯರ್ಥಿಗಳು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು)**

ನವೋದಯ ವಿದ್ಯಾಲಯ ಸಮಿತಿಯು 6ನೇ ತರಗತಿಯ ಪ್ರವೇಶಕ್ಕಾಗಿ 2022ರಲ್ಲಿ ನಡೆಸಿದ ಜ.ನ.ವಿ ಪ್ರವೇಶ ಪರೀಕ್ಷೆಯಲ್ಲಿ ನನ್ನ ಮಗ/ಮಗಳು, ಕುಮಾರ/ಕುಮಾರಿ ........................................................ ಆಯ್ಕೆಯಾಗಿದ್ದಾನೆ/ಳೆ ಎಂಬ ವಿಷಯವು, ಜವಾಹರ ನವೋದಯ ವಿದ್ಯಾಲಯ, ..........................................ತಾಲೂಕು ............................... ಜಿಲ್ಲೆ......................................., ರಾಜ್ಯ.................................. ದ ಪತ್ರ ಕ್ರಮಾಂಕ ............................... ದಿನಾಂಕ......................... ಮೂಲಕ ತಿಳಿದುಬಂದಿದೆ. ಆಯ್ಕೆಯಾಗಿರುವ ಜ.ನ.ವಿ............................ ಜಿಲ್ಲೆ............................................ರಾಜ್ಯ......................................ವರ್ಷ..............................

ನಾನು, ಜ.ನ.ವಿ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ನನ್ನ ಮಗ/ಮಗಳು, ಕುಮಾರ/ಕುಮಾರಿ ............................................ ಜೊತೆಯಲ್ಲಿ ಈ ಕೆಳಗಿನ ನನ್ನ ವಿಳಾಸದಲ್ಲಿ ..................................ರಿಂದ (ದಿನಾಂಕ, ತಿಂಗಳು, ವರ್ಷ)ವಾಸಿಸುತ್ತಿದ್ದೇನೆ.

ಹಳ್ಳಿ/ಪಟ್ಟಣ...................................
ತಾಲೂಕು.......................................
ಜಿಲ್ಲೆ............................................
ರಾಜ್ಯ............................................
ಪಿನ್ ಕೋಡ್.................................

ಈ ಮೇಲೆ ನಾನು ಒದಗಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿದ್ದು, ಸತ್ಯದಿಂದ ಯಾವುದನ್ನೂ ಮರೆಮಾಚಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ:................................. ಪಾಲಕರ ಸಹಿ
ದಿನಾಂಕ:............................ ಪೂರ್ಣ ಹೆಸರು ಮತ್ತು ವಿಳಾಸ

## ಪ್ರಮಾಣ ಪತ್ರ

**(ಜ.ನ.ವಿ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾದ ಮಗುವಿನ ಪಾಲಕರು ದಾಖಲಾತಿಯ ಸಮಯದಲ್ಲಿ ವಾಸಸ್ಥಾನ ಪ್ರಮಾಣ ಪತ್ರವನ್ನು ಜಿಲ್ಲೆಯ ಸಂಬಂಧಪಟ್ಟ ಅಧಿಕಾರಿಗಳಾದ ಎಸ್.ಡಿ.ಎಂ/ತಹಶೀಲ್ದಾರರಿಂದ ಸಹಿ ಪಡೆದು ಸಲ್ಲಿಸಬೇಕು)**

ಈ ಮೂಲಕ ದೃಢೀಕರಿಸುವುದೇನೆಂದರೆ ಶ್ರೀ/ಶ್ರೀಮತಿ...........................ಇವರ ಮಗ/ಮಗಳು, ಕುಮಾರ/ಕುಮಾರಿ.................................ಇವರು 6ನೇ ತರಗತಿಗೆ ಆಯ್ಕೆಯಾಗಿದ್ದು, ಜ.ನ.ವಿ, ......................,
ಜಿಲ್ಲೆ................................ ಇಲ್ಲಿ ಪ್ರವೇಶ ಬಯಸಿದ್ದಾರೆ. ಇವರು ಈ ಮೇಲೆ ಒದಗಿಸಿರುವ ಎಲ್ಲ ವಿವರಗಳನ್ನು ದೃಢೀಕರಿಸಿದ್ದು ದಾಖಲಾತಿಗಳ ಪ್ರಕಾರ ಸರಿಯಾಗಿವೆ.

**ಇವರು ವಾಸಿಸುವ ಸ್ಥಳವು ಗ್ರಾಮೀಣ/ನಗರ ಪ್ರದೇಶದಲ್ಲಿದ್ದು ................................ ........ ಜಿಲ್ಲೆಯಲ್ಲಿರುತ್ತದೆ.**

ಸಹಿ

ಎಸ್.ಡಿ.ಎಂ/ತಹಶೀಲ್ದಾರರು

# ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ –2022

## ಪ್ರಮಾಣ ಪತ್ರ

ಅಭ್ಯರ್ಥಿಯ ಪಾಸ್ಪೋರ್ಟ್ ಗಾತ್ರದ ಫೋಟೋ ಅಂಟಿಸಿ

ಗಣಕೀಕೃತ (ಆನ್‌ಲೈನ್) ಅರ್ಜಿಯನ್ನು ತುಂಬಲು ಕೊನೆಯ ದಿನ **30 ನೇ ನವೆಂಬರ್ 2021**

ಈ ಮೂಲಕ ಕೆಳಗೆ ನೀಡಿರುವ ಮಾಹಿತಿಯು ಸರಿಯೆಂದು ಪ್ರಮಾಣೀಕರಿಸುತ್ತೇನೆ.

ನಾನು ಕುಮಾರ/ಕುಮಾರಿ ---------------------------

5ನೇ ತರಗತಿಯನ್ನು -------------------------------- ಶಾಲೆಯಲ್ಲಿ ಓದುತ್ತಿದ್ದೇನೆ.

ನಾನು 6ನೇ ತರಗತಿಯ ಜವಾಹರ ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆ 2022 ಬರೆಯಲು ಇಚ್ಛಿಸುತ್ತೇನೆ.

| | |
|---|---|
| ಅಭ್ಯರ್ಥಿಯ ಹೆಸರು | |
| ತಂದೆಯ ಹೆಸರು | |
| ತಾಯಿಯ ಹೆಸರು | |
| ಪೋಷಕರ ಹೆಸರು ಮತ್ತು ಸಂಬಂಧ, ಇದ್ದರೆ | |

| ಜನ್ಮ ದಿನಾಂಕ | ದಿನಾಂಕ | | ತಿಂಗಳು | | ವರ್ಷ | | | |
|---|---|---|---|---|---|---|---|---|
| | | | | | | | | |

ಹುಟ್ಟಿದ ದಿನಾಂಕ ಅಕ್ಷರಗಳಲ್ಲಿ
………………………………………………………………..
………………………………………………………………..

| ಲಿಂಗ ದಯವಿಟ್ಟು (√)ಗುರುತು ಹಾಕಿ | ಗಂಡು | ಹೆಣ್ಣು | ಟ್ರಾನ್ಸ್ ಜಂಡರ್ |
|---|---|---|---|
| | | | |

ವರ್ಗ

| ಸಾಮಾನ್ಯ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ ಹಿಂದುಳಿದ ವರ್ಗಗಳು (ಓಬಿಸಿ) (ಕೇಂದ್ರ ಪಟ್ಟಿಯ ಪ್ರಕಾರ) |
|---|---|---|---|
| | | | |

ವಿಕಲಾಂಗಗಳ ಪ್ರಕಾರಗಳು, ಇದ್ದರೆ
ಸರಿಯಾದ ಪ್ರಕಾರಕ್ಕೆ ದಯವಿಟ್ಟು √ಗುರುತು ಹಾಕಿ

| ಶಾರೀರಿಕ ಅಂಗ ವಿಕಲ | ಕುರುಡ | ಕಿವುಡ |
|---|---|---|
| | | |

**ಗುರುತಿಸಬೇಕಾದ ಚಿಹ್ನೆ :**------------------------------------------------------------------------

ಈಗಿನ ಸಂಪೂರ್ಣ ವಿಳಾಸ

ಮೊಬೈಲ್ ನಂ ________________ಇಮೇಲ್ ________________

ರಾಷ್ಟ್ರೀಯತೆ : __________________ ಧರ್ಮ : ____________________

ಪರೀಕ್ಷಾ ಮಾಧ್ಯಮ : _______________
(ಪುಸ್ತಿಕೆಯಲ್ಲಿ ರಾಜ್ಯದ ಎದುರು ನಮೂದಿಸಿರುವ ಯಾವುದಾದರೂ ಒಂದು ಭಾಷೆಯನ್ನು ಆಯ್ಕೆ ಮಾಡಿಕೊಳ್ಳಿ)

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ನನ್ನ ಮಗ / ಮಗಳು ಓದುತ್ತಿರುವ, ಓದಿರುವ ಶಾಲೆಯು ಮಾನ್ಯತೆ ಅರ್ಹತೆ ಪಡೆದ ಶಾಲೆಯಾಗಿರುತ್ತದೆ.

| ವಿವರಣೆ | 3ನೇ ತರಗತಿ | 4ನೇ ತರಗತಿ | 5ನೇ ತರಗತಿ |
|---|---|---|---|
| 3, 4 ಮತ್ತು 5ನೇ ತರಗತಿ ಓದಿದ ಶಾಲೆ ಹೆಸರು | | | |
| ಶಾಲೆ ಇರುವ ಸ್ಥಳ (ಗ್ರಾಮೀಣ/ಪಟ್ಟಣ) | | | |
| ಶಾಲೆಗೆ ಸೇರಿದ ತಿಂಗಳು, ವರ್ಷ | | | |
| ತರಗತಿ ಪಾಸಾದ ತಿಂಗಳು, ವರ್ಷ | | | |
| ಬ್ಲಾಕ್ (ತಾಲೂಕಿನ) ಹೆಸರು | | | |
| ಜಿಲ್ಲೆಯ ಹೆಸರು | | | |
| ರಾಜ್ಯದ ಹೆಸರು | | | |

೩,೪ ಹಾಗೂ ೫ನೇ ತರಗತಿಯಲ್ಲಿ ಒಂದೇ ಒಂದು ದಿನ ನಗರ ಪ್ರದೇಶದ ಶಾಲೆಯಲ್ಲಿ ಓದಿದ್ದರೂ ಅದನ್ನು ನಗರವೆಂದು ಪರಿಗಣಿಸಲಾಗುವುದು. ಈ ವಿಷಯವನ್ನು ನಾನು ತಿಳಿದಿರುತ್ತೇನೆ.

ಜವಾಹರ ನವೋದಯ ವಿದ್ಯಾಲಯದಲ್ಲಿ ಪ್ರವೇಶ ಪಡೆದ ಮೇಲೂ ಈ ಪ್ರಮಾಣ ಪತ್ರದಲ್ಲಿ ಯಾವುದೇ ತಪ್ಪು ಮಾಹಿತಿ ಕಂಡುಬಂದಲ್ಲಿನನ್ನ ಮಗ/ ಮಗಳ ಪ್ರವೇಶವನ್ನು ತಿರಸ್ಕರಿಸಬಹುದಾಗಿದೆ.

ನಾನು, ಭವಿಷ್ಯದಲ್ಲಿ ಮೇಲೆ ನೀಡಿರುವ ಮಾಹಿತಿಯನ್ನು ಬದಲಾಯಿಸಲು ವಿನಂತಿಸಿಕೊಳ್ಳುವುದಿಲ್ಲ. ಆನ್‌ಲೈನ್ ಮತ್ತು ಆಫ್‌ಲೈನ್ ಮಾಹಿತಿಯಲ್ಲಿ ಹೊಂದಾಣಿಕೆಯಾಗದಿದ್ದಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಿರುವ ಮಾಹಿತಿಯೇ ಅಂತಿಮವೆಂದು ಪರಿಗಣಿಸಲು ನಾನು ಒಪ್ಪಿಗೆ ಸೂಚಿಸುವೆ.

| ಅಭ್ಯರ್ಥಿಯ ಸಹಿ | ಪಾಲಕರ/ಪೋಷಕರ ಸಹಿ |
|---|---|
| | |

ಟಿಪ್ಪಣಿ: NIOSನ ಯೋಜನೆಯಡಿಯಲ್ಲಿ ಓದಿದ ಅಭ್ಯರ್ಥಿಗಳ ವಾಸಸ್ಥಾನವನ್ನು ಆಧರಿಸಿ ಪ್ರದೇಶವನ್ನು ನಿರ್ಧರಿಸಲಾಗುವುದು.

# ಇತರೆ ಹಿಂದುಳಿದ ವರ್ಗಗಳ ಸರ್ಟಿಫಿಕೇಟ್ ಫಾರಮೇಟ್

**(ಭಾರತ ಸರ್ಕಾರದ ಅಧೀನದಲ್ಲಿ ಬರುವ ಎಲ್ಲ ಕೇಂದ್ರ ಸರಕಾರದ ನೇಮಕಾತಿ / ಕೇಂದ್ರ ಸರಕಾರದ ಶಾಲೆಗಳ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಈ ಇತರೆ ಹಿಂದುಳಿದ ವರ್ಗಗಳ ಪ್ರಮಾಣಪತ್ರದ ಫಾರ್ಮನ್ನು ಸಲ್ಲಿಸತಕ್ಕದ್ದು)**

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ಶ್ರೀ/ಶ್ರೀಮತಿ/ಕುಮಾರ/ಕುಮಾರಿ------------------- ----------------ಇವರ ಮಗ/ಮಗಳು ಶ್ರೀ/ಶ್ರೀಮತಿ -------------------------- ----- ಹಳ್ಳಿ / ಪಟ್ಟಣ ------------------------------ ಜಿಲ್ಲೆ/ವಿಭಾಗ --------- ------------ ಇದರೊಳಗೆ ------------------------ ಈ ರಾಜ್ಯಕ್ಕೆ ಸಂಬಂಧಪಟ್ಟಿದೆ. ಕೆಳಗಿನಂತೆ __________ ವರ್ಗ ಎಂದು ಮಾನ್ಯತೆ ಪಡೆದಿದೆ.

(i) Resolution No. 12011/68/93-BCC(C) dated 10/09/93 published in the Gazette of India Extraordinary Part I Section I No. 186 dated 13/09/93.
(ii) Resolution No. 12011/9/94-BCC dated 19/10/94 published in the Gazette of India Extraordinary Part I Section I No. 163 dated 20/10/94.
(iii) Resolution No. 12011/7/95-BCC dated 24/05/95 published in the Gazette of India Extraordinary Part I Section I No. 88 dated 25/05/95.
(iv) Resolution No. 12011/96/94-BCC dated 9/03/96.
(v) Resolution No. 12011/44/96-BCC dated 6/12/96 published in the Gazette of India Extraordinary Part I Section I No. 210 dated 11/12/96.
(vi) Resolution No. 12011/13/97-BCC dated 03/12/97.
(vii) Resolution No. 12011/99/94-BCC dated 11/12/97.
(viii) Resolution No. 12011/68/98-BCC dated 27/10/99.
(ix) Resolution No. 12011/88/98-BCC dated 6/12/99 published in the Gazette of India Extraordinary Part I Section I No. 270 dated 06/12/99.
(x) Resolution No. 12011/36/99-BCC dated 04/04/2000 published in the Gazette of India Extraordinary Part I Section I No. 71 dated 04/04/2000.
(xi) Resolution No. 12011/44/99-BCC dated 21/09/2000 published in the Gazette of India Extraordinary Part I Section I No. 210 dated 21/09/2000.
(xii) Resolution No. 12015/9/2000-BCC dated 06/09/2001.
(xiii) Resolution No. 12011/1/2001-BCC dated 19/06/2003.
(xiv) Resolution No. 12011/4/2002-BCC dated 13/01/2004.
(xv) Resolution No. 12011/9/2004-BCC dated 16/01/2006 published in the Gazette of India Extraordinary Part I Section I No. 210 dated 16/01/2006.
(xvi) Resolution No. 12011/14/2004-BCC dated 12/03/2007 published in the Gazette of India Extraordinary Part I Section I No. 67 dated 12/03/2007.
(xvii) Resolution No. 12018/6/2005-BCC dated 10/10/2007 published in the Gazette of India Extraordinary Part I Section I No. 311 dated 12/10/2007.
(xviii) Resolution No. 12015/2/2007-BCC dated 18/08/2010 published in the Gazette of India Extraordinary Part I Section I No. 232 dated 18/08/2010 & Corrigendum dated 11/10/2010.

ಶ್ರೀ/ ಶ್ರೀಮತಿ/ಕುಮಾರ/ಕುಮಾರಿ* ------------------------- ಮತ್ತು / ಅಥವಾ ಅವರ ಕುಟುಂಬ ಸಾಮಾನ್ಯವಾಗಿ ವಾಸವಾಗಿರುವ ಸ್ಥಳ ------------------------- ಜಿಲ್ಲೆ / ವಿಭಾಗದ ---------------- ರಾಜ್ಯ. ಇದರ ಜೊತೆಗೆ ಪ್ರಮಾಣೀಕರಿಸುವುದೇನೆಂದರೆ ಇವರು ವೈಯಕ್ತಿಕವಾಗಿಯಾಗಲಿ/ ವಿಭಾಗಕ್ಕೆ ಸಂಬಂಧವಾಗಿಯಾಗಲಿ ಭಾರತ ಸರಕಾರದ 3 ನೇ ಅಧಿನಿಯಮದನ್ವಯ ಆದಾಯ ಮಿತಿಯಲ್ಲಿಯ ನಿಯಮಕ್ಕೆ ಒಳಪಡುವುದಿಲ್ಲ. ವೈಯಕ್ತಿಯ ವಿಭಾಗ ಮತ್ತು ತರಬೇತಿ ಓ.ಎಮ್.ನಂ.36012/22/93-ಸ್ಥಾಪನಾ.(ಎಸ್ ಸಿ ಟಿ) ದಿನಾಂಕ 08/09/93 ಇದನ್ನು ಮಾರ್ಪಡಿಸಲಾದ ಸಂಖ್ಯೆ

ಒ ಎಮ್ ನಂ. 36033/3/2004 ಸ್ಥಾಪನಾ. (ವಾಸ) ದಿನಾಂಕ 09/03/2004, ಅಥವಾ ಭಾರತ ಸರಕಾರದ ಇತ್ತೀಚಿನ ಅಧಿಸೂಚನೆಯಾಗಿದೆ.

ದಿನಾಂಕ :

ಜಿಲ್ಲಾ ಮೆಜಿಸ್ಟ್ರೇಟ್/ಜಿಲ್ಲಾಧಿಕಾರಿಗಳು/
ಸಂಬಂಧಪಟ್ಟ ಅಧಿಕಾರಿಗಳು

**Seal**

**NOTE:**

**(a)** The term 'Ordinarily' used here will have the same meaning as in Section 20 of the Representation of the People Act, 1950.

**(b)** The authorities competent to issue Caste Certificates are indicated below:

- **(i)** District Magistrate / Additional Magistrate / Collector / Deputy Commissioner / Additional Deputy Commissioner / Deputy Collector / Ist Class Stipendiary Magistrate / Sub-Divisional magistrate / Taluka Magistrate / Executive Magistrate / Extra Assistant Commissioner (not below the rank of Ist Class Stipendiary Magistrate).
- **(ii)** Chief Presidency Magistrate / Additional Chief Presidency Magistrate / Presidency Magistrate.
- **(iii)** Revenue Officer not below the rank of Tehsildar.
- **(iv)** Sub-Divisional Officer of the area where the candidate and / or his family resides.

**(c)** The annual income / status of the parents of the applicant should be based on financial year ending March 31, 2011.